
# ಕಳ್ಳರಿದ್ದಾರೆ.....ಎಚ್ಚರಿಕೆ

## ನಾಟಕ



ಸಿ.ಪಿ.ನಾಗರಾಜ

## ಕಳ್ಳರಿದ್ದಾರೆ ಎಚ್ಚರಿಕೆ ನಾಟಕದ ಬಗ್ಗೆ ಅಭಿಪ್ರಾಯಗಳು

ಓದಿ ರಸಾಸ್ವಾದಿಸಲೂ, ಅಭಿನಯಿಸಿ ಸಂತೋಷಪಡಲು ಯೋಗ್ಯವಾಗಿದೆ. **-ಕೈಯಾರ ಕಿಞ್ಞಣ್ಣ ರೈ**

ಸರ್ವವ್ಯಾಪಿಯೂ ಅಂತರ್ಯಾಮಿಯೂ ಆದ ಭ್ರಷ್ಟಾಚಾರದ ಒಂದು ಮುಖವನ್ನು ನಾಟಕದಲ್ಲಿ ತೀಕ್ಷ್ಣವಾಗಿ ರೂಪಿಸಲಾಗಿದೆ. **-ಗೌರೀಶ ಕಾಯ್ಕಿಣಿ**

ಭ್ರಷ್ಟ ರಾಜಕಾರಣಿಗಳೂ ಮತ್ತು ಲಂಚಕೋರ ಅಧಿಕಾರಿಗಳೇ ನಿಜವಾದ ಕಳ್ಳರೆಂದು ಈ ನಾಟಕದಲ್ಲಿ ಚಿತ್ರಿಸಿದ್ದು ಖುಷಿ ನೀಡಿತು. **-ಚನ್ನಣ್ಣ ವಾಲೀಕಾರ**

ಕೇವಲ ಬಸ್ ಸ್ಟ್ಯಾಂಡಿನಲ್ಲಿಯೇ ಅಲ್ಲ, ಅತಿ ಸೂಕ್ಷ್ಮಾತಿಸೂಕ್ಷ್ಮವಾಗಿ ಅಧಿಕಾರದಲ್ಲೂ ಹೇಗೆ ಭ್ರಷ್ಟರು ಅಡಗಿ ಕುಳಿತಿದ್ದಾರೆ ಎಂಬುದನ್ನು ಸರಳವಾಗಿ ನಿರೂಪಿಸಿದ್ದೀರಿ. **-ಜ. ಹೊ. ನಾರಾಯಣಸ್ವಾಮಿ**

ನಿಮ್ಮ ರಂಗಪರಿಜ್ಞಾನಕ್ಕೆ ನಿದರ್ಶನವಾಗಿದೆ. ಭಾಷೆ ಜೀವಂತವಾಗಿದೆ. ಗತಿ ಲವಲವಿಕೆಯಿಂದ ಕೂಡಿದೆ. ಪ್ರೇಕ್ಷಕರನ್ನು ಹಿಡಿದಿಡಬಲ್ಲ ನಾಟಕ. **-ಕುಂ. ವೀರಭದ್ರಪ್ಪ**

# ಕಳ್ಳರಿದ್ದಾರೆ.... ಎಚ್ಚರಿಕೆ

**(ರಚನೆ : 1995)**

**ಸಿ.ಪಿ.ನಾಗರಾಜ**

**ನಾಗು ಸ್ಮಾರಕ ಪ್ರಕಾಶನ**

75, 'ಎ' ಬ್ಲಾಕ್, 5 ನೆಯ ಕ್ರಾಸ್, ಕ್ರಿಷ್ಣ ಗಾರ್ಡನ್,

ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.

ngy7777@gmail.com

**ಪಾತ್ರವರ್ಗ**

ಈರಯ್ಯ

ರಮೇಶ

ಪುಟ್ಟಸ್ವಾಮಿ

ಹುಚ್ಚ

ವಾಚ್‌ಮನ್

ಆಫೀಸರ್

ಮಂತ್ರಿ

ಮಂತ್ರಿಯ ಮಗ

ಸೆಲೆಕ್ಷನ್ ಕಮಿಟಿ ಮೆಂಬರ್

# ಕಳ್ಳರಿದ್ದಾರೆ..... ಎಚ್ಚರಿಕೆ

[ಬೆಂಗಳೂರಿನ ಸರ್ಕಾರಿ ಬಸ್ ನಿಲ್ದಾಣ. ಆಗ ತಾನೆ ಬಸ್ಸಿನಿಂದ ಇಳಿದು ಬಂದ ಈರಯ್ಯ, ಪುಟ್ಟಸ್ವಾಮಿ ಮತ್ತು ರಮೇಶ ರಂಗದಲ್ಲಿ ಕಾಣಿಸಿಕೊಳ್ಳುತ್ತಾರೆ.)

**ಈರಯ್ಯ** : (ಬಸ್ ನಿಲ್ದಾಣದಲ್ಲಿದ್ದ ಅಸಂಖ್ಯಾತ ಬಸ್ಸುಗಳನ್ನು ನೋಡುತ್ತಾ)

ಓಹೋಹೋ.... ಏನ್ಲಾ ಮೊಗ, ಈಪಾಟಿ ಬಸ್ಗೊಳು! ನಮ್ಮ ಹಳ್ಳಿಗೆ ಒಂದು ಗೌರ್ಮೆಂಟ್ ಬಸ್ ಬುಡಿ ಅಂದ್ರೆ, ಇಲ್ಲ ಅಂತಾರೆ. ಎಲ್ಲಾನು ತಂದು ಇಲ್ಲೇ ನಿಲ್ಲಿಸ್ಕೊಂಡವ್ರಲ್ಲ, ಬೊಡ್ಡಿಹೈಕ್ಳು.

**ರಮೇಶ** : ಬೆಂಗಳೂರು ರಾಜಧಾನಿ ಅಲ್ವೇನಪ್ಪ! ಅದ್ಕೆ ಎಲ್ಲಾ ಕಡೆಯಿಂದ್ಲು ಸಾವಿರಾರು ಜನ ದಿನ ಬೆಳಗಾದ್ರೆ ಇಲ್ಲಿಗೆ ಬತ್ತರೆ ಹೋಯ್ತರೆ. ಅಪ್ಪ, ಇಲ್ಲೆ ಒಂದು ಗಳಿಗೆ ನಿಂತಿರಿ. ಬಂದ್ಬುಟ್ಟೆ.

[ಉಚ್ಚೆಯನ್ನು ಹುಯ್ಯಲೆಂದು ರಂಗದ ಬಲಬದಿಯತ್ತ ನಡೆಯುತ್ತಾನೆ.]

**ಈರಯ್ಯ** : ಎಲ್ಲಿಗಪ್ಪ?

**ರಮೇಶ** : ಇಲ್ಲೆ ಬಂದೆ ತಡಿಯಪ್ಪ.

[ರಂಗದ ಬಲಬದಿಯಿಂದ ನೇಪಥಕ್ಕೆ ಸರಿಯುತ್ತಾನೆ.]

**ಪುಟ್ಟಸ್ವಾಮಿ** : ಬೆಂಗಳೂರು ಅಂದ್ರೆ ಏನು ತಿಳ್ಕೊಂಡಿದ್ದೀರಿ? ಇಡೀ ಕರ್ನಾಟಕದ ಅಧಿಕಾರವೆಲ್ಲ ಇಲ್ಲೇ ಇರೋದು!

**ಈರಯ್ಯ** : ದುಡ್ಡು ಎಲ್ಲಾ ಇಲ್ಲೇ ಸೇರ್ಕೊಂಡಿರುವಂಗೆ ಕಾಣ್ತದೆ ಬುಡಪ್ಪ. ಪಟ್ಟಣದೊಳಕ್ಕೆ ಬಸ್ಸು ಬರೋಕೆ ಶುರು ಮಾಡುತ್ತಾವಿಂದ್ಲೂ ನೋಡುತ್ಲೆ ಇವ್ನಿ. ಎಂಥೆಂಥಾ ಬಿಲ್ಡಿಂಗೊಳು! ಅಬ್ಬಬ್ಬಾ, ಎಂಥೆಂಥಾ ಬಂಗ್ಲೆಗೊಳು! ಏನು, ಇವ್ನೆಲ್ಲಾ ಮನುಸ್ರೆ ಕಟ್ಟುದ್ರೊ, ಇಲ್ದೇದ್ರೆ ಆಕಾಶದಿಂದ್ಲೆ ಎತ್ಕೊಂಡು ಬಂದು ಕುಂಡಿಸ್ಬುಟ್ರೋ!

**ಪುಟ್ಟಸ್ವಾಮಿ** : ಈಗೇನು ಕಂಡ್ರಿ? ಇನ್ನು ಮುಂದಕ್ಕೆ ನಗರದೊಳಕ್ಕೆ ಕರ್ಕೊಂಡು ಹೋಯ್ತಿನಿ ಬನ್ನಿ, ಒಂದೊಂದು ಹೋಟೆಲ್ ಕಟ್ಟಡವ, ಕೋಟಿ ಕೋಟಿ ಖರ್ಚು ಮಾಡಿ ಕಟ್ಟವ್ರೆ. ನಮ್ಮೂರ ಒಚ್ಚರಿಯಿಂದ ಮಾರ್ಕೊಂಡು ಬಂದ್ರು, ಅಂಥಾದೊಂದು ಕಟ್ಟಡ ತಕೋಕಾಗೂದಿಲ್ಲ. ಒಂದು ಗಳ್ಗೆ ಇಲ್ಲೆ ನಿಂತಿರಿ. ಹೋಗಿ ಒಂದು ಪೇಪರ್ ತಕೊಂಡು ಬಂದುಬಿಡ್ತೀನಿ.

[ರಂಗದ ಎಡಬದಿಯಿಂದ ನೇಪಥ್ಯಕ್ಕೆ ಹೋಗುತ್ತಾನೆ. ಈರಯ್ಯನವರೊಬ್ಬರೆ ಅತ್ತ ಇತ್ತ ನೋಡುತ್ತಾ, ಅಲ್ಲೆ ಬೋರ್ಡ್ ಒಂದರ ಮೇಲೆ ಅಂಟಿಸಿದ್ದ ಇಪ್ಪತ್ತು ಮೂವತ್ತು ಫೋಟೊಗಳನ್ನು ಕಂಡು ಅಚ್ಚರಿಗೊಳ್ಳುತ್ತಾರೆ. ಅದರ ಮುಂದಕ್ಕೆ ಹೋಗಿ, ಆ ಫೋಟೊಗಳಲ್ಲಿನ ವ್ಯಕ್ತಿಗಳನ್ನೇ ನೋಡುತ್ತ ನಿಲ್ಲುತ್ತಾರೆ. ಅಷ್ಟರಲ್ಲಿ ರಮೇಶ ಬರುತ್ತಾನೆ.]

**ಈರಯ್ಯ** : ಇದೇನ್ಲಾ ಮೊಗ? ಇಲ್ಲಿ ಇಷ್ಟೊಂದು ಜನ ಪಟ ಹಾಕೊಂಡವ್ರೆ! ಈ ಬಸ್‌ಸ್ಟ್ಯಾಂಡ್ ಬಿಲ್ಡಿಂಗೆಲ್ಲಾ ಇವರ್ದೆಯೊ?

**ರಮೇಶ** : ನೀನು ಚೆನ್ನಾಗಿ ಹೇಳ್ದೆ ಕಣಪ್ಪ! ಇವರೆಲ್ಲಾ ಕಳ್ಳರು.

**ಈರಯ್ಯ** : ಏನಾ ಕಳ್ಳರೇ! ಮಂತೆ, ಕಳ್ಳರ ಪಟವ ಇಲ್ಯಾಕೆ ಹಿಂಗಾಕಿದ್ದರು?

[ಅಷ್ಟರಲ್ಲಿ ಪೇಪರ್ ತೆಗೆದುಕೊಂಡು ಪುಟ್ಟಸ್ವಾಮಿ ಅಲ್ಲಿಗೆ ಬರುತ್ತಾನೆ.]

**ರಮೇಶ** : ಪುಟ್ಟಸ್ವಾಮಣ್ಣ, ಕಳ್ಳರ ಫೋಟೊಗಳ, ಇಲ್ಲಿ ಯಾಕೆ ಹಾಕವ್ರೆ ಅಂತ ನಮ್ಮಪ್ಪ ಕೇಳ್ತಾವ್ರೆ, ನೀವೇ ಹೇಳಿ.

**ಪುಟ್ಟಸ್ವಾಮಿ** : ಓ... ನೀವು ಯಾವತ್ತು ಬೆಂಗಳೂರ್ಗೆ ಮೈಸೂರ್ಗೆ ಬಂದೋರೆ ಅಲ್ಲ. ಅದಕ್ಕೆ ನಿಮಗೆ ಗೊತ್ತಿಲ್ಲ.

[ಫೋಟೊಗಳ ಕಡೆ ಕೈ ತೋರಿಸುತ್ತಾ]

ಇವರೆಲ್ಲ ಒಂದಲ್ಲ ಒಂದ್ಸತಿ, ಪಿಕ್‌ಪಾಕೆಟ್ ಮಾಡ್ತಾ, ಪೋಲಿಸೋರ್ನ ಕೈಗೆ ಸಿಗಾಕೊಂಡು, ಜೈಲುವಾಸ ಅನುಭವಿಸಿರುವ ಕಳ್ಳರು.

**ಈರಯ್ಯ** : ಜೈಲ್ಗೆ ಹಾಕದ್ಮೇಲೆ, ತಿರ್ಗ ಇಲ್ಲಿಗ್ಯಾಕೆ ಬಂದರು?

**ಪುಟ್ಟಸ್ವಾಮಿ** : ಜೈಲ್ಗೆ ಹಾಕ್ತರೆ ಅಂದ್ರೆ, ಅಲ್ಲೆ ಜೀವಮಾನವೆಲ್ಲ ಇಡೂದಿಲ್ಲ. ಎರಡು ತಿಂಗಳು ಮೂರು ತಿಂಗಳು ಜೈಲಾಯ್ತದೆ. ಆಮೇಲೆ ಈಚ್ಗೆ ಬುಟ್‌ಬುಡ್ತರೆ. ಇವರು ತಿರ್ಗ ಪಿಕ್‌ಪಾಕೆಟ್ ಮಾಡ್ಕೊಂಡೆ ಜೀವನ ಕಳೀತಾರೆ. ಇದೇ ಕಸುಬು ಇವರ್ಗೆ.

**ರಮೇಶ** : ಅದಕ್ಕೆ "ಇಂಥಾವರ ಬಗ್ಗೆ ಹುಷಾರಾಗಿರಿ" ಅಂತ ಜನಕ್ಕೆ ಎಚ್ಚರಿಕೆ ಕೊಡೂಕೆ, ಇವರ ಪೋಟೊಗಳನ್ನೆಲ್ಲಾ ಸರ್ಕಾರದೋರು ಹಾಕವ್ರೆ. ಅಲ್ನೋಡಿ, ಆ ಪೋಟೊಗಳ ಮೇಲೆ ಬರ್ದದೆ ``ಕಳ್ಳರಿದ್ದಾರೆ....ಎಚ್ಚರಿಕೆ" ಅಂತ.

**ಈರಯ್ಯ** : ನಂಗೆ ಓದೋಕೆ ಬರಿಯಾಕೆ ಬಂದಿದ್ರೆ, ನಾನೇ ತಿಳ್ಕೊಬೋದಾಗಿತ್ತು. ನಿಮ್ಮ ಕೇಳ್ವಂಗೆ ಇರಲಿಲ್ಲ. ಹೋಗ್ಲಿ. ನಿನ್ತಾವು ಇರೂ ದುಡ್ಡು ಹುಷಾರು ಕಣ್ ಮೊಗ. ಎಲ್ಲಿಟ್ಟುಕೊಂಡಿದ್ದೀಯೆ ತೋರ್ಸು?

**ರಮೇಶ** : ನನ್ತಾವು ಯಾವ ಮಹಾ ದುಡ್ಡಿದ್ದದು? ಬೆಳಗ್ಗೆ ಊರಲ್ಲಿ ನೀವು ಕೊಟ್ಟಿದ್ದ ಐನೂರು ತಾನೆ?

**ಈರಯ್ಯ** : ಎಷ್ಟಾರ ಆಗ್ಲಿ. ಅದು ದುಡ್ಡಲ್ಲವೇ? ತೋರ್ಸು ಯಾವ ಜೋಬಲ್ಲಿ ಇಟ್ಕೊಂಡಿದ್ದೀಯೆ? ಸರ್ಕಾರದೋರು ಇಷ್ಟೊಂದು ಎಚ್ಚರಿಕೆ ಕೊಟ್ಟವ್ರೆ ಅಂದ್ಮೇಲೆ ನಮ್ಮ ಹುಷಾರಲ್ಲಿ ನಾವು ಇರ್ಬೇಕು.

[ರಮೇಶನು ತನ್ನ ಬುಶ್‌ಶರ್ಟ್ ಮೇಲಿನ ಜೇಬನ್ನು ಅಪ್ಪನಿಗೆ ತೋರಿಸತೊಡಗುತ್ತಾನೆ. ಅಷ್ಟರಲ್ಲಿ ರಂಗದ ಎಡಬದಿಯಿಂದ ಇಪ್ಪತ್ತೈದರ ಹರೆಯದ ಒಬ್ಬ ಯುವಕ ಅಲ್ಲಿಗೆ ಬರುತ್ತಾನೆ. ಕೊಳಕಾದ ಉಡುಗೆಗಳನ್ನು ವಿಚಿತ್ರವಾಗಿ ಧರಿಸಿದ್ದಾನೆ. ಬಗಲಲ್ಲಿ ಒಂದು ಚಿಕ್ಕ ಚೀಲ ನೇತಾಡುತ್ತಿದೆ. ಅದರಲ್ಲಿ ಪೇಪರ್ ಕಟಿಂಗ್ಸ್ ಪೋಟೊಗಳು ತುಂಬಿವೆ. ತನ್ನಲ್ಲಿಯೇ ಏನೇನೋ ಗೊಣಗಿಕೊಳ್ಳುತ್ತಾ. ರಂಗದ ಬಲಬದಿಗೆ ಬಂದು ನಿಲ್ಲುತ್ತಾನೆ. ಈರಯ್ಯ ಮತ್ತು ರಮೇಶ ತಮ್ಮ ಮಾತುಗಳಲ್ಲೇ ಮಗ್ನರಾಗಿದ್ದಾರೆ]

**ರಮೇಶ** : [ತನ್ನ ಜೇಬಿನ ಭಾಗವನ್ನು ತೋರಿಸುತ್ತ]
ಇಲ್ಲೆ ಅದೆ ಕಣಪ್ಪ.

[ಸ್ವಲ್ಪ ಮೆತ್ತಗಿನ ಧ್ವನಿಯಲ್ಲಿ]
ನಂದು ಇರ್ಲಿ ನಿಮ್ತಾವಿರು ದುಡ್ಡು ಹುಷಾರು ಕಣಪ್ಪ.

**ಈರಯ್ಯ** : [ತನ್ನ ನಡುವಿನ ಉಬ್ಬಿದ ಭಾಗದ ಮೇಲೆ ಕೈಯಾಡಿಸುತ್ತ]

ಇಲ್ಲಿಗೆ ಕೈಹಾಕಿ ಕೀಳೂ ಮಗ ಯಾವೋನು ಇದ್ದನು? ಐನುಗುಡಿ ಜಾತ್ರೇಲಿ, ಮುಡುಕುತೊರೆ ಜಾತ್ರೇಲಿ ದನ ತಗಿಯೋಕೆ ಹೋದಾಗಲೆಲ್ಲಾ ನಮ್ಮೂರೋರು ನಾಲ್ಕೈದು ಜನದ ದುಡ್ಡು ಎಪ್ಪತ್ತು ಎಂಬತ್ತು ಸಾವಿರ ಇಟ್ಕೊಂಡು ತಿರುಗಾಡಿವ್ನಿ. ಯಾವತ್ತು ಒಂದು ಕಾಸು ಕಳ್ಕೊಂಡೋನಲ್ಲ. ನಿಂತಾವಿರು ದುಡ್ಡ ಹುಷಾರಾಗಿ ನೋಡ್ಕೊ.

[ಪುಟ್ಟಸ್ವಾಮಿಯು ಈಗ ಇವರಿಬ್ಬರ ಗಮನವನ್ನು ಆ ಯುವಕನತ್ತ ತಿರುಗಿಸುತ್ತಾನೆ.]

**ಪುಟ್ಟಸ್ವಾಮಿ :** ಅಲ್ನೋಡಿ, ಅವನ್ಯಾರೊ, ಏನು ಮಾಡ್ತಾವ್ನೆ?

[ಎಲ್ಲರು ಅತ್ತ ನೋಡತೊಡಗುತ್ತಾರೆ. ಆ ಯುವಕ, ತನ್ನ ಬಗಲಲ್ಲಿದ್ದ ಕೈಚೀಲದಿಂದ ನಾಲ್ಕಾರು ಪೇಪರ್ ಕಟಿಂಗ್ ಫೋಟೊಗಳನ್ನು ತೆಗೆದು, ಅವಕ್ಕೆ ಗೋಂದನ್ನು ಸವರಿ, ಬಸ್‌ಸ್ಟ್ಯಾಂಡಿನ ಗೋಡೆಯ ಮೇಲೆ ಅಂಟಿಸುತ್ತಾನೆ. ಅನಂತರ ಆ ಫೋಟೊಗಳನ್ನು ನೋಡುತ್ತ ಚಪ್ಪಾಳೆ ತಟ್ಟುತ್ತಾನೆ. ಮರುಕ್ಷಣದಲ್ಲಿಯೇ ಗಟ್ಟಿಯಾಗಿ ನಗುತ್ತಾನೆ. ಕೆಲವು ಕ್ಷಣಗಳ ನಂತರ ಜೋರಾಗಿ ಅಳತೊಡಗುತ್ತಾನೆ. ಅನಂತರ ವಿಕೃತ ಧ್ವನಿಯಿಂದ ಅರಚತೊಡಗುತ್ತಾನೆ. ಈ ವಿಕೃತ ಧ್ವನಿಯನ್ನು ಕೇಳಿದ ಕೂಡಲೇ, ಬಸ್‌ಸ್ಟ್ಯಾಂಡಿನ ವಾಚ್‌ಮನ್ ಲಾಠಿಯೊಂದನ್ನು ಕೈಯಲ್ಲಿ ಹಿಡಿದು ಅದನ್ನು ನೆಲಕ್ಕೆ ಬಡಿದು ಗದ್ದರಿಸುತ್ತಾ, ರಂಗದ ಎಡಬದಿಯಿಂದ ಬರುತ್ತಾನೆ)

**ವಾಚ್‌ಮನ್** : ಏ...ಏ...ಏನ್ ಮಾಡ್ತಾ ಇದ್ದೀಯೋ ಅಲ್ಲಿ?

[ವಾಚ್‌ಮನ್ನನ ಅಬ್ಬರವನ್ನು ಕೇಳಿದ ಕೂಡಲೇ, ಆ ಯುವಕ ಅಲ್ಲಿಂದ ಬಿದ್ದಂಬೀಳ ಓಡುತ್ತಾ, ರಂಗದ ಬಲಬದಿಯಿಂದ ನೇಪಥ್ಯಕ್ಕೆ ಸರಿಯುತ್ತಾನೆ.]

**ವಾಚ್‌ಮನ್** : [ಯುವಕನು ಓಡಿ ಹೋದ ಕಡೆಗೆ ನೋಡುತ್ತ]

ಏ.... ಲುಚ್ಚಾ ಬಾಂಚೊತ್, ನಿಂತ್ಕೋ ಇಲ್ಲಿ.... ನೀನು ಕೈಗೆ ಸಿಕ್ಕು, ಸರಿಯಾಗಿ ಮಾಡ್ತೇನೆ.

**ಪುಟ್ಟಸ್ವಾಮಿ** : ಅವನ್ಯಾರು?

**ವಾಚ್‌ಮನ್** : ಅವನ್ಯಾರೊ ಹುಚ್ಚ ಕಣ್ರಿ. ನೆನ್ನೆಯಿಂದ ಇಲ್ಲೆ ಸಾಯ್ತಾವ್ನೆ.

**ಪುಟ್ಟಸ್ವಾಮಿ** : (ಬಸ್ ಸ್ಟ್ಯಾಂಡಿನ ಗೋಡೆಯ ಕಡೆಗೆ ಕೈ ತೋರಿಸುತ್ತಾ)

ಅಲ್ಲಿ.... ಅದೇನ ಅಂಟಸವ್ನಲ್ಲ?

**ವಾಚ್‌ಮನ್** : ಪೇಪರ್ಗಳಲ್ಲಿ ಬರ್ತವಲ್ಲ ಆ ಪೋಟೊಗಳು. ಎಲ್ಲಾ ಕಡೆ ಹಿಂಗೆ ಅಂಟಿಸ್ಕೊಂಡು ಹೊಯ್ತಿರ್ತನೆ. ಅವನ ಚೀಲದ ತುಂಬಾ ಬರಿ ಫೋಟೋಗಳೆ ಇವೆ!

**ಪುಟ್ಟಸ್ವಾಮಿ** : ಯಾರ ಪೋಟೊಗಳು?

**ವಾಚ್‌ಮನ್** : "ಕೋಟಿಗಟ್ಟಲೆ ಹಣ ನುಂಗಿ, ಆಸ್ತಿಪಾಸ್ತಿ ಮಾಡವ್ರೆ" ಅನ್ನು ಆರೋಪಕ್ಕೆ ಗುರಿಯಾಗವ್ರಲ್ಲ. ಅಂಥಾ ರಾಜಕಾರಣಿಗಳ, ದೊಡ್ಡ ದೊಡ್ಡ ಆಫೀಸರ್ಗಳ ಪೋಟೊಗಳು ಕಣ್ರಿ. ಇಂಗ್ಲಿಶ್, ಕನ್ನಡ ಎಲ್ಲಾ ಪೇಪರ್ಗಳಲ್ಲೂ, ಮ್ಯಾಗಜೈನ್‌ಗಳಲ್ಲೂ ಬಂದಿರೋದ್ನ ಕತ್ರಿಸಿ ಕತ್ರಿಸಿ ಇಡ್ಕೊಂಡವ್ನೆ.

**ಪುಟ್ಟಸ್ವಾಮಿ** : ಇದೊಂಥರ ಹುಚ್ಚು!

**ವಾಚ್‌ಮನ್** : ಅವನ್ಗೆ ಹುಚ್ಚು. ನಮಗೆ ಗ್ರಾಚಾರ. "ಬಸ್ ಸ್ಟ್ಯಾಂಡಿನಲ್ಲಿ ಯಾರೊ, ಏನೇನೊ ಅಂಟಿಸ್ತಾ ಇದ್ರೆ, ನೀನೇನು ಕತ್ತೆ ಮೇಯಿಸ್ತಾ ಇದ್ದೀಯ" ಅಂತ ನಮ್ಮ ಸಾಹೇಬರು ಉಗೀತಾವ್ರೆ.

[ಆ ಯುವಕನನ್ನು ಬಯ್ಯುತ್ತಾ, ಗೋಡೆಯ ಮೇಲೆ ಅವನು ಅಂಟಿಸಿದ್ದ ಪೋಟೊಗಳನ್ನು ಕಿತ್ತು ಹಾಕಿ, ರಂಗದ ಬಲಬದಿಯಿಂದ ನೇಪಥ್ಯಕ್ಕೆ ಸರಿಯುತ್ತಾನೆ.]

**ಈರಯ್ಯ** : ಏನೋ ವಿಚಿತ್ರ!

**ಪುಟ್ಟಸ್ವಾಮಿ** : ನಡೀರಿ ಮತ್ತೆ ಹೋಗೋಣ.

**ಈರಯ್ಯ** : ನೀನು ಮುಂದಕ್ಕೆ ನಡೆದರಲ್ಲವೇ, ನಾವು ಬರೋದು.

**ರಮೇಶ** : ಪುಟ್ಟಸ್ವಾಮಣ್ಣ, ಈಗ ಮೊದಲು ಎಲ್ಲಿಗೆ ಹೋಗೋಣ?

**ಪುಟ್ಟಸ್ವಾಮಿ** : ಈಗ ಮೊದ್ಲು ದೊಡ್ಡ ಕಚೇರಿ ಹತ್ರ ಹೋಗಿ, 'ಇಂಟರ್ ವ್ಯೂ ಕಾರ್ಡ್' ಕಳಸವ್ರಲ್ಲ, ಆ ಆಫೀಸರ್ನ ನೋಡ್ಕ. ಇವತ್ಗೆ ಇಪ್ಪತ್ತು ದಿವಸದ ಹಿಂದೆ, ನಾನು ಬಂದು ಅವರ್ನ ಕಂಡಿದ್ದಾಗ "ಇಂಟರ್ ವ್ಯೂ ಕಾರ್ಡ್ ಬಂದ ಕೂಡ್ಲೆ, ನನ್ನ ಬಂದು ನೋಡಿ" ಅಂತ ಹೇಳಿದ್ರು.

**ಈರಯ್ಯ** : ಹಂಗಾದ್ರೆ ನಡೀರಿ, ಅಲ್ಗೆ ಹೋಗುವ.
[ರಂಗದ ಬಲಬದಿಯತ್ತ ಎಲ್ಲರೂ ಅಡಿಯಿಡತೊಡಗುತ್ತಾರೆ.]

**ಪುಟ್ಟಸ್ವಾಮಿ** : ರಮೇಶ, ಹಂಗೆ ಹೊಯ್ತಿರುವಾಗ ನಿಂಬೆಹಣ್ಣು ಮಾರ್ತಾಯಿರೋದು ಕಂಡ್ರೆ, ನಂಗೊಸಿ ಹೇಳು.

**ಈರಯ್ಯ** : ನಿಂಬೆಹಣ್ಣು!... ಯಾಕೆ?

**ಪುಟ್ಟಸ್ವಾಮಿ** : ದೊಡ್ಡ ದೊಡ್ಡ ಆಫೀಸರ್ನ, ಎಂ.ಎಲ್.ಎ.ಗಳನ್ನ, ಮಂತ್ರಿಗಳನ್ನ ನೋಡೋಕೆ ಹೋದಾಗ, ನನ್ನ ಜೇಬ್ನಲ್ಲಿ ಯಾವಾಗ್ಲು ನಿಂಬೆಹಣ್ಣು ಇರ್ತದೆ. ಅವರನ್ನು ನೋಡಿದ ಕೂಡಲೇ, ಅವರ ಕೈಗೆ ಒಂದು ಹಣ್ಣು ಕೊಟ್ಬುಟ್ಟು, ನಮಸ್ಕಾರ ಮಾಡುದ್ರೆ, ಅವರ್ಗೆ ಏನೋ ಒಂಥರಾ ಸಂತೋಷ ಆಯ್ತದೆ.

**ಈರಯ್ಯ** : ನೀನು ಬುಡಪ್ಪ, ಐನಾತಿ ಕುಳ. ಬರಿ ಮಾತಲ್ಲೆ ಮಂಗ್ರಮಾಯ ಮಾಡಿ, ತಿಂಗಳು ಬೆಳಕ ತೋರಿಸ್ಬುಡ್ತೀಯೆ!

**ಪುಟ್ಟಸ್ವಾಮಿ** : ಹಂಗಿಲ್ದೇದ್ರೆ ಈಗಿನ ಕಾಲದಲ್ಲಿ ಬದುಕಾದದೇ?

[ನೇಪಥ್ಯದ ಕಡೆಗೆ ನೋಡುತ್ತಾ]
ರಮೇಶ, ಅಲ್ಲಿ ಹೋಯ್ತಾದಲ್ಲ.... ಆ ಆಟೋ ಕರಿ.... ಅದರಲ್ಲೇ ಹೋಗೋಣ.

**ರಮೇಶ** : ಆಟೋ.... ಆಟೋ....
[ಎಂದು ಕೂಗುತ್ತ, ರಂಗದ ಬಲಬದಿಯಿಂದ ನೇಪಥ್ಯಕ್ಕೆ ಸರಿಸುತ್ತಾನೆ. ಈರಯ್ಯ ಮತ್ತು ಪುಟ್ಟಸ್ವಾಮಿ ಅದೇ ದಿಕ್ಕಿನಲ್ಲಿ ನೇಪಥ್ಯದತ್ತ ನಡೆಯುತ್ತಿದ್ದಂತೆಯೇ ರಂಗದ ಮೇಲೆ ಕತ್ತಲು ಆವರಿಸುತ್ತದೆ. ಮತ್ತೆ ಸ್ವಲ್ಪ ಸಮಯದ ನಂತರ ರಂಗದ ಮೇಲೆ ಬೆಳಕು ವ್ಯಾಪಿಸಿದಾಗ, ಕಛೇರಿಯ ದೃಶ್ಯ ಕಂಡು ಬರುತ್ತದೆ. ಕುರ್ಚಿಯೊಂದರಲ್ಲಿ ಆಫೀಸರ್ ಒಬ್ಬರು ಕುಳಿತಿದ್ದಾರೆ. ಅಲ್ಲಿಗೆ ಮೊದಲು ಪುಟ್ಟಸ್ವಾಮಿ ಬರುತ್ತಾನೆ.]

**ಪುಟ್ಟಸ್ವಾಮಿ** : [ನಿಂಬೆಹಣ್ಣನ್ನು ಅವರ ಕೈಗೆ ನೀಡಿ....]
ನಮಸ್ಕಾರ ದೇವರು, ಚೆನ್ನಾಗಿದ್ದೀರಾ.

**ಆಫೀಸರ್** : ಹೂ.... ಚನ್ನಾಗಿದ್ದೀನಿ. ಇಂಟರ್ ವ್ಯೂ ಕಾರ್ಡ್ ಬತ್ತೇನ್ರಿ?

**ಪುಟ್ಟಸ್ವಾಮಿ** : ನೆನ್ನೇನೆ ಬಂತು ದೇವರು. ಅದಕ್ಕೆ ಇವತ್ತು ತಮ್ಮನ್ನ ನೋಡ್ಕೊಂಡು ಹೋಗೋಣ ಅಂತ ಬಂದೊ.

**ಆಫೀಸರ್** : ಏನು ಬರಿ ಕೈಲಿ ನೋಡ್ಕೊಂಡು ಹೋಗೋಕೆ ಬಂದ್ರ?

**ಪುಟ್ಟಸ್ವಾಮಿ** : ಇಲ್ಲ ದೇವರು. ಆ ಹುಡುಗನ ತಂದೇನೂ, ಆ ಹುಡುಗನ್ನೂ ಜೊತೇಲಿ ಕರ್ಕೊಂಡು ಬಂದಿದ್ದೀನಿ. ನೀವು ಹೇಳಿದ್ದಕ್ಕೆ ಏರ್ಪಾಡು ಮಾಡಿದ್ದೀನಿ.

**ಆಫೀಸರ್** : ಮೊದಲು ಮಾತಾಡಿದಷ್ಟು ತಂದಿದ್ದೀರಿ ತಾನೆ?

**ಪುಟ್ಟಸ್ವಾಮಿ** : ಇವತ್ತು ಒಂದು ಸಾವಿರ ಕೊಡಿಸ್ತೀನಿ. ಈಸ್ಕೊಳ್ಳಿ ದೇವರು.

**ಆಫೀಸರ್** : ಏನು, ಒಂದು ಸಾವಿರವ? ಎರಡು ಅಂತ ಅವತ್ತೆ ಹೇಳಿರಲಿಲ್ವೇನ್ರಿ?

**ಪುಟ್ಟಸ್ವಾಮಿ** : ಹೇಳಿದ್ರಿ ದೇವರು, ಆದ್ರೆ....

**ಆಫೀಸರ್** : ಆದರೆ ಅಂದ್ರೆ ಏನ್ರಿ?... "ಯಾರ್‍ಯಾರ ಹತ್ರ ಹೋಗ್ಬೇಕು... ಯಾರ್‍ಯಾರ್ನ ಹಿಡಿಬೇಕು... ನಮಗೆ ಎಲ್ಲಾ ದಾರೀನು ಹೇಳ್ಕೊಡಿ ಸಾರ್" ಅಂತ ಅವತ್ತು ಕೇಳ್ಕೊಂಡಿರಲಿಲ್ವೇನ್ರಿ?

**ಪುಟ್ಟಸ್ವಾಮಿ** : ಇಲ್ಲ ಅಂತೀನಾ ದೇವರು.

**ಆಫೀಸರ್** : ನೋಡ್ರಿ.... ನಿಮ್ಮ ಹುಡುಗನಿಗೆ ಇಂಟರ್ ವ್ಯೂ ಕಾರ್ಡ್ ಬಂದಾಕ್ಷಣ ಕೆಲ್ಸ ಗ್ಯಾರಂಟಿಯಾಗಿ ಸಿಗುತ್ತೆ ಅಂತ ನಂಬ್ಕೊಬೇಡಿ. ಅರವತ್ತೇಳು ಪರ್ಸೆಂಟ್ ತಕೊಂಡು, ಮೂರನೆಯ ರ್‍ಯಾಂಕ್ ಬಂದಿರೋ ನಿಮ್ಮ ಹುಡುಗನಿಗೆ ಕಳಿಸ್ದಂಗೆ, ಐವತ್ತೈದು ಪರ್ಸೆಂಟ್ ತಕೊಂಡು, ಸೆಕೆಂಡ್ ಕ್ಲಾಸ್ ಬಂದಿರೋ ಹುಡುಗನಿಗೂ ಇಂಟರ್ ವ್ಯೂ ಕಾರ್ಡ್ ಕಳ್ಸಿದೆ. ಇವರಲ್ಲಿ ಯಾರು ಬೇಕಾದ್ರು ಸೆಲೆಕ್ಟ್ ಆಗಬಹುದು, ಗೊತ್ತಾ?

**ಪುಟ್ಟಸ್ವಾಮಿ** : ನಂಬರು, ರ್‍ಯಾಂಕು, ಚಿನ್ನದ ಪದಕ ಇವೆಲ್ಲಾನು ಸ್ವಲ್ಪನಾದ್ರು ನೋಡುದಿಲ್ವೆ ದೇವರು?

**ಆಫೀಸರ್** : ಇಂಟರ್ ವ್ಯೂ ಮಾಡೋದು ಯಾಕೆ ಅಂತ ಗೊತ್ತೇನ್ರಿ ನಿಮಗೆ?

**ಪುಟ್ಟಸ್ವಾಮಿ** : ಕೆಲಸಕ್ಕೆ ತಕೋಕೆ.

**ಆಫೀಸರ್** : ಯಾರ್‍ನ?

**ಪುಟ್ಟಸ್ವಾಮಿ** : ಮೆರಿಟ್ ಇರೋರ್‍ನ.

**ಆಫೀಸರ್** : ದಡ್‌ದಡ್ಡರಂಗೆ ಮಾತಾಡ್ಬೇಡ್ರಿ. ಇಂಟರ್ ವ್ಯೂ ಮಾಡೋದು ಮೆರಿಟ್ ಬಂದೋರ್‍ನ ತುಳಿಯೂಕೆ; ಬೇಕಾದೋರ್‍ನ ಸೆಲೆಕ್ಟ್ ಮಾಡೋಕೆ. 'ಬೇಕಾದವರು' ಅಂದ್ರೆ ಗೊತ್ತು ತಾನೆ?

**ಪುಟ್ಟಸ್ವಾಮಿ** : ಗೊತ್ತು ದೇವರು. ಅವತ್ತು ನೀವೇ ಹೇಳಿದ್ರಲ್ಲ. ಆಯ್ಕೆ ಮಾಡೋ ಮೆಂಬರುಗಳ ಜಾತಿ ಹುಡುಗರು, ಅವರಲ್ಲೂ ದುಡ್ಡು ಕೊಟ್ಟೋರು.

**ಆಫೀಸರ್** : ನೋಡುದ್ರಾ, ಎಲ್ಲಾನು ತಿಳ್ಕೊಂಡಿದ್ದೀರಿ. ಮತ್ತೆ ದುಡ್ಡು ಉಳಿಸ್ಬೇಕು ಅಂತ ಏನೇನೂ ಸಬೂಬು ಹೇಳ್ಬೇಡಿ. ನೀವು ಈಗ ಎರಡು ಸಾವಿರ ಕೊಡಲಿಲ್ಲ ಅಂದ್ರೆ, ಮುಂದಕ್ಕೆ ನಿಮ್ಮ ಹುಡುಗನಿಗೆ ತೊಂದರೆಯಾದ್ರೂ ಆಗಬಹುದು. ಹೀಗೆ ಹೇಳ್ತೀನಿ ಅಂತ ಏನೂ ತಿಳ್ಕೊಬೇಡಿ.

(ತನ್ನಲ್ಲಿಯೇ)
ಥುತ್, ನಮ್ಮ ಜನವೇ ಹಿಂಗೆ. ಕೆಲ್ಸ ಆಗೋತನಕ ಒಂದು ರೀತಿ, ಆದ್ಮೇಲೆ ಒಂದು ರೀತಿ.

**ಪುಟ್ಟಸ್ವಾಮಿ** : ಇಷ್ಟೊಂದು ಬೇಜಾರು ಮಾಡ್ಕೊಂಡ್ರೆ ಹೆಂಗೆ ದೇವರು? ಆಗ್ಲಿ ಮೊದಲು ಮಾತಾಡಿದ್ದಷ್ಟನ್ನೇ ಕೊಡಿಸ್ತೀನಿ. ದಯವಿಟ್ಟು ಮುಂದುಕ್ಕು ನೀವೇ ದಾರಿ ತೋರಿಸ್ಬೇಕು.

**ಆಫೀಸರ್** : ಮೊದಲು ತಕೊಂಡು ಬನ್ನಿ.
[ರಂಗದ ಎಡಬದಿಯಿಂದ ಪುಟ್ಟಸ್ವಾಮಿಯು ನೇಪಥ್ಯಕ್ಕೆ ಸರಿದು, ಮತ್ತೆ ಕೆಲವು ಕ್ಷಣಗಳಲ್ಲಿ ಈರಯ್ಯ ಮತ್ತು ರಮೇಶರ ಜೊತೆಗೂಡಿ ರಂಗದ ಎಡಬದಿಯಿಂದಲೇ ರಂಗವನ್ನು ಪ್ರವೇಶಿಸಿ, ಬಂದು ಪಕ್ಕದಲ್ಲಿ ನಿಂತುಕೊಂಡು, ಈರಯ್ಯನವರನ್ನು ಕುರಿತು]

**ಪುಟ್ಟಸ್ವಾಮಿ** : ಈಗ ಅದರಲ್ಲಿ ಎರಡು ಸಾವಿರ ಈಚೆಗೆ ತಗೊಳಿ. ಇವರ್ಗೆ, ಇಲ್ಲಿ ಕೊಡ್ಬೇಕು.

**ಈರಯ್ಯ** : ಎಷ್ಟು ಅಂದಪ್ಪ?.... ಎರಡು ಸಾವಿರವೇ?

**ಪುಟ್ಟಸ್ವಾಮಿ** : ಹೂ. ಬೇಗ ಬೇಗ ತಗೀರಿ. ಇವರ್ತಕೆ ಹತ್ತಾರು ಜನ ಬತ್ತಾಯಿರ್ತರೆ ಹೊಯ್ತಾಯಿರ್ತರೆ. ಇವತ್ತು ಏನು ಬಗೆಯೊ ಒಸಿ ಪುರ್ಸೊತ್ತಾಗವ್ರೆ.

[ತನ್ನ ಅಂಗಿಯನ್ನು ಈರಯ್ಯ ಮೇಲಕ್ಕೆ ಎತ್ತಿ, ನಡುವಿನಲ್ಲಿ ಬಿಗಿದು ಕಟ್ಟಿದ್ದ ಹಣದ ಗಂಟನ್ನು ಬಿಚ್ಚಿ, ಅದರೊಳಗಿನಿಂದ ಎರಡು ಸಾವಿರ ರೂಗಳನ್ನು ತೆಗೆದು, ಮತ್ತೆ ಗಂಟನ್ನು ಹಾಗೆಯೆ ನಡುವಿಗೆ ಬಿಗಿದು ಕಟ್ಟಿ, ಅಂಗಿ ಬಟ್ಟೆಯನ್ನು ಮೇಲೆ ಬಿಡುತ್ತಾರೆ. ಈಗ ಮತ್ತೊಮ್ಮೆ ದುಡ್ಡನ್ನು ಎಣಿಸಿ]

**ಈರಯ್ಯ** : ಹೂ, ತಕೊಳಪ್ಪ.
[ಹಣವನ್ನು ಪುಟ್ಟಸ್ವಾಮಿಯ ಹಸ್ತ ನೀಡಲು ಮುಂದಾಗುತ್ತಾರೆ]

**ಪುಟ್ಟಸ್ವಾಮಿ** : ಏ.... ನನ್ನ ಕೈಗೆ ಒಂದ್ಸತಿ ಯಾಕೆ? ಹೆಂಗಿದ್ರು ನೀವೇ ಬಂದಿದ್ದೀರಲ್ಲ, ಕೊಡ್ಬನ್ನಿ ನೀವೆ.

**ಈರಯ್ಯ** : ಒಪ್ಪಿಸ್ಕೊಬೇಕು ಬುದ್ಧಿ (ಹಣವನ್ನು ನೀಡಿ ಕೈಮುಗಿಯುತ್ತಾರೆ.)

**ಆಫೀಸರ್** : [ನೋಟುಗಳನ್ನು ಎಣಿಸಿಕೊಂಡು, ಜೇಬಲ್ಲಿಟ್ಟುಕೊಂಡ ನಂತರ]
ಎಲ್ಲಾ ಒಳ್ಳೇದಾಗ್ಲಿ, ನಾನು ಪುಟ್ಟಸ್ವಾಮಿ ಅವರ್ಗೆ ಅವತ್ತೆ, ಯಾರ್‍ಯಾರನ್ನು ನೋಡ್ಬೇಕು ಅಂತ ಹೇಳಿದ್ದೇನೆ. ನೀವು ಅವರ್ನೆಲ್ಲಾ ಸರಿಯಾಗಿ ನೋಡ್ಕೊಂಡ್ರೆ, ನಿಮ್ಮ ಹುಡುಗನಿಗೆ ಕೆಲ್ಸ ಗ್ಯಾರಂಟಿ ಸಿಗುತ್ತೆ. ನಿಮ್ಮ ಹುಡುಗ ಸೆಲೆಕ್ಟ್ ಆದ್ಮೇಲೆ, ನಮ್ಮ ಆಫೀಸಿನಿಂದ ಏನೇನು ಅನುಕೂಲ ಬೇಕೊ ಅದ್ನೆಲ್ಲಾ ಮಾಡ್ಕೊಡ್ತೀನಿ.

**ಈರಯ್ಯ** : ಹೆಂಗೊ ನಿಮ್ಮ ದಯ ಬುದ್ಧಿ. ನಿಮ್ಮ ಉಪ್ಕಾರನ ಜೀವಮಾನ ಪೂರ್ತಿ ಮರಿಯೂದಿಲ್ಲ.

**ಪುಟ್ಟಸ್ವಾಮಿ** : ಅವರು ಇರೂದೆ ಹಿಂಗೆ ಹತ್ತಾರು ಜನಕ್ಕೆ ಒಳ್ಳೇದು ಮಾಡೋಕೆ.
(ರಮೇಶನನ್ನು ತೋರಿಸುತ್ತಾ)
ಇವನೇ ದೇವರು, ನಮ್ಮ ಹುಡುಗ.
[ರಮೇಶ ಕೈ ಮುಗಿಯುತ್ತಾನೆ]

**ಆಫೀಸರ್** : ಇಂಟರ್ ವ್ಯೂನಲ್ಲಿ ಧೈರ್ಯವಾಗಿ ಚೆನ್ನಾಗಿ ಮಾಡ್ಬೇಕ್ರಿ.

**ರಮೇಶ** : ಮಾಡ್ತೀನಿ ಸಾರ್.

**ಆಫೀಸರ್** : ನಿನಗೆ ಎಲ್ಲಾ ಒಳ್ಳೆಯದಾಗಲಿ. ಇನ್ನು ಹೋಗ್ಬನ್ನಿ.

**ಈರಯ್ಯ** : ಇನ್ನೂ ಯಾರ್ಯಾರ್ತಕೆ ಹೋಗ್ಬೇಕು ಬುದ್ಧಿ?

**ಆಫೀಸರ್** : ನಿಮ್ಮ ಜಿಲ್ಲಾ ಮಿನಿಷ್ಟ್ರು ಹೆಂಗಿದ್ರು ನಿಮ್ಮ ಜನವೇ ಅಂತಲ್ಲ. ಅವರ್ನ ನೀವು ಬಿಗಿಯಾಗಿ ಹಿಡ್ಕೊಂಡ್ರೆ ನಿಮ್ಮ ಕೆಲಸ ಆದಂಗೆ.

**ಪುಟ್ಟಸ್ವಾಮಿ** : (ಈರಯ್ಯನವರತ್ತ ನೋಡುತ್ತಾ.)
ನಂಗೆಲ್ಲಾನು ಆಗ್ಲೆ ಹೇಳವ್ರೆ ಬನ್ನಿ. ಅಲ್ಲೆಲ್ಲಾ ಹೋಗವ.

(ಆಫೀಸರ್ ಅವರನ್ನು ಕುರಿತು)
ದೇವರು, ಮುಂದಿನ ಶನಿವಾರ ತಿರ್ಗ ಬಂದು ನೋಡ್ಲೆ ನಿಮ್ಮನ್ನ.

**ಆಫೀಸರ್** : ಇಂಟರ್ ವ್ಯೂ ಯಾವತ್ತು?

**ರಮೇಶ** : ಇಪ್ಪತ್ನಾಲ್ಕರನೆ ತಾರೀಖು ಮಂಗಳವಾರ ಸಾರ್.

**ಪುಟ್ಟಸ್ವಾಮಿ** : ಇವತ್ಗೆ ಎಂಟು ದಿವಸಕ್ಕೆ ಅದೆ ದೇವರು.

**ಆಫೀಸರ್** : ಹಾಗಾದ್ರೆ ಶನಿವಾರ ಬರೋದು ಬೇಡಿ. ಇಪ್ಪತ್ತೆರಡನೆ ತಾರೀಖು ಸೋಮವಾರ ಸಾಯಂಕಾಲ ಆರು ಘಂಟೆಗೆ ಬಂದು ನೋಡಿ. ಅದಕ್ಕೂ ಮುಂಚೆ ನಾನು ಹೇಳಿದ ಕಡೆಯಲ್ಲೆಲ್ಲಾ ಹೋಗಿ ಬಂದೋಬಸ್ತು ಮಾಡ್ಕೊಳಿ.

**ಪುಟ್ಟಸ್ವಾಮಿ** : ಆಗ್ಲಿ ದೇವರು. ನಾವು ಬರ್ತೀವಿ.

[ಎಲ್ಲರು ಕೈ ಮುಗಿದು, ಅಲ್ಲಿಂದ ತೆರಳುತ್ತಾರೆ. ರಂಗದ ಬಲಬದಿಯ ಅಂಚಿಗೆ ಬರುತ್ತ]

ಈಗ ಸೀದಾ ಇಲ್ಲಿಂದ ನಮ್ಮ ಮಂತ್ರಿಗಳ ಬಂಗ್ಲೇತಕೆ ಹೊಂಟೋಗೋಣ.

**ಈರಯ್ಯ** : ನಡೀರಿ ಮತ್ತೆ, ದೊಡ್ಡಜ್ಜೆ ಹಾಕೊಂಡು.

**ಪುಟ್ಟಸ್ವಾಮಿ** : ಬಂಗ್ಲೆ ಇಲ್ಲೆ ಅದೆ ಅಂತ ತಿಳ್ಕೊಂಡ್ರ. ಸಕನೆ ದೂರ ಅದೆ. ಒಂದು ಆಟೋ ಹಿಡ್ದು ಹೋಗೋಣ. ರಮೇಶ, ಹಂಗೆ ಹೊಯ್ತಾ ಹಾರ ತಕೋಬೇಕು ಕಣಪ್ಪ, ಜ್ಞಾಪಕವಾಗಿರು.

[ರಂಗದ ಬಲಬದಿಯಿಂದ ನೇಪಥ್ಯಕ್ಕೆ ಅವರೆಲ್ಲರೂ ಸರಿಯುತ್ತಿದ್ದಂತೆಯೇ. ರಂಗದ ಮೇಲೆ ಕತ್ತಲು ವ್ಯಾಪಿಸುತ್ತದೆ. ಸ್ವಲ್ಪ ಸಮಯದ ನಂತರ ರಂಗದ ಮೇಲೆ ಬೆಳಕು ಮೂಡಿದಾಗ, ಮಂತ್ರಿಗಳು ಆಸೀನರಾಗಿರುವ ಕೊಠಡಿಯ ದೃಶ್ಯ ಕಂಡು ಬರುತ್ತದೆ. ಅಲ್ಲಿಗೆ ಈ ಮೂರು ಮಂದಿಯು ರಂಗದ ಎಡಭಾಗದಿಂದ ಆಗಮಿಸುತ್ತಾರೆ. ಪುಟ್ಟಸ್ವಾಮಿಯು ಹೂವಿನ ಹಾರವನ್ನು ಮಂತ್ರಿಯ ಕೊರಳಿಗೆ ಹಾಕಿ. ಕೈಗೆ ನಿಂಬೆಹಣ್ಣನ್ನು ನೀಡುತ್ತಿದ್ದಂತೆಯೇ, ಉಳಿದವರಿಬ್ಬರೂ ಕೈಮುಗಿಯುತ್ತಾರೆ]

**ಮಂತ್ರಿ** : ಏನು ಬಂದ್ರಿ?

**ಪುಟ್ಟಸ್ವಾಮಿ** : ನಮ್ಮ ಈರಯ್ಯನವರ ಮಗನಿಗೆ ಸರ್ಕಾರಿ ಕಾಲೇಜಿನಲ್ಲಿ ಲೆಕ್ಚರರ್ ಕೆಲಸಕ್ಕೆ ಇಂಟರ್ ವ್ಯೂ ಬಂದಿತ್ತು. ಅದಕ್ಕೆ ತಮ್ಮನ್ನ ನೋಡ್ಕೊಂಡು ಹೋಗೋಣ ಅಂತ ಬಂದೊ.

**ಈರಯ್ಯ** : ಇವನೇ ನನ್ನ ಮಗ. ಎಂ.ಎ., ಮಾಡವ್ನೆ ಬುದ್ಧಿ.

**ರಮೇಶ** : ನಮಸ್ಕಾರ ಸಾರ್.

**ಮಂತ್ರಿ** : (ರಮೇಶನನ್ನು ಕುರಿತು)
ಸಬ್ಜೆಕ್ಟ್ ಯಾವುದು? ಪರ್ಸಂಟೇಜ್ ಎಷ್ಟು ಬಂದಿದೆ?

**ರಮೇಶ** : ಕನ್ನಡ ಎಂ.ಎ., ಸಾರ್. ಅರವತ್ತೇಳು ಪರ್ಸೆಂಟ್ ಬಂದಿವೆ. ಮೂರನೆಯ ರ್‍ಯಾಂಕ್, ಎರಡು ಚಿನ್ನದ ಪದಕ ಬಂದಿವೆ, ಸಾರ್.

**ಮಂತ್ರಿ** : ಗುಡ್. ಪರವಾಗಿಲ್ಲ ಕಣಯ್ಯ, ನಿನ್ನ ಮಗ ಚೆನ್ನಾಗಿ ಸ್ಕೋರ್ ಮಾಡಿದ್ದಾನೆ.

**ಈರಯ್ಯ** : ಎಲ್ಲಾ ನಿಮ್ಮಂಥವ್ರ ಆಶೀರ್ವಾದ ಬುದ್ಧಿ. ಈ ಕೆಲ್ಸನ ತಾವು ಕೊಡುಸ್ಲೇಬೇಕು.

**ಪುಟ್ಟಸ್ವಾಮಿ** : ನಿಮ್ಮನ್ನೆ ನಂಬ್ಕೊಂಡು ಬಂದಿದ್ದೀವಿ ಸಾರ್.

**ಮಂತ್ರಿ** : ಆಗ್ಲಿ ನೋಡೋಣ. ಈಗ ವಿಧಾನಸಭೆ ನಡೀತಾಯಿದೆ. ನನಗೆ ಸ್ವಲ್ಪನೂ ಬಿಡುವಿಲ್ಲ. ಪುಟ್ಟಸ್ವಾಮಿ, ನಿನಗೆ ನನ್ನ ಮಗ ಚೆನ್ನಾಗಿ ಗೊತ್ತಲ್ವೆ?

**ಪುಟ್ಟಸ್ವಾಮಿ** : ಗೊತ್ತು ಸಾರ್. ಮೊನ್ನೆ ಎಲೆಕ್ಷನ್ನಲ್ಲಿ ಹದಿನೈದು ದಿನ ಅವರ ಜೊತೇಲೆ ತಿರುಗಾಡಿದ್ದೆ.

**ಮಂತ್ರಿ** : ನನ್ನ ಮಗನ ಹತ್ತಿರ ನೀವು ಎಲ್ಲಾ ಡೀಟೈಲ್ಸ್ ಹೇಳಿ, ಇಂಟರ್ ವ್ಯೂ ಕಾರ್ಡ್ ನಂಬರ್, ಅದೆಲ್ಲಾನು ಕೊಟ್ಟು ಹೋಗಿರಿ. ಅನಂತರ ನಾನು ಅಟೆಂಡ್ ಮಾಡ್ತೀನಿ.

**ಪುಟ್ಟಸ್ವಾಮಿ** : ಆಗ್ಲಿ ಸಾರ್. ಹಂಗೆ ಮಾಡ್ತೀವಿ.
[ಮಂತ್ರಿಗಳು ಅಲ್ಲಿಂದ ಹೊರಡುತ್ತಾರೆ.]

**ಈರಯ್ಯ** : [ಕೈ ಮುಗಿಯುತ್ತಾ]
ತಮ್ಮಿಂದ ಇದೊಂದು ಉಪ್ಕಾರ ಆಗ್ಲೇಬೇಕು ಬುದ್ಧಿ.

**ಮಂತ್ರಿ** : ಆಗ್ಲಿ ಖಂಡಿತ ಮಾಡೋಣ. ಈಗ ನನ್ನ ಮಗ ಇಲ್ಲಿಗೆ ಬರ್ತನೆ. ಅವನ ಜೊತೇಲಿ ಮಾತಾಡಿ.
[ಮೂವರ ನಮಸ್ಕಾರಗಳನ್ನು ಸ್ವೀಕರಿಸುತ್ತ, ರಂಗದ ಬಲಬದಿಯಿಂದ ಮಂತ್ರಿಗಳು ನೇಪಥ್ಯಕ್ಕೆ ಸರಿಯುತ್ತಾರೆ]

**ಈರಯ್ಯ** : ಇದೇನಯ್ಯ? "ನನ್ನ ಮಗನಿಗೆ ಹೇಳಿ" ಅಂದ್ಬುಟ್ಟು ಹೊಯ್ತಾವ್ರೆ! ಇವರ ಮಗನಿಗೂ ಇವರಷ್ಟೇ ಅಧಿಕಾರ ಇದ್ದದೊ?

**ಪುಟ್ಟಸ್ವಾಮಿ** : ಮಗನಿಗೆ ಅಧಿಕಾರ ಇಲ್ಲ. ಆದ್ರೆ ಇವರಿಗೆ ಕೈ ತುಂಬಾ ಕೆಲ್ಸ ಇರ್ತದಲ್ಲ, ಅದಕ್ಕೆ ತಮ್ಮ ನೆಂಟರಿಷ್ಟರ, ಹತ್ತಿರದವರ ಕೆಲಸ ಮಾಡ್ಸುಬೇಕಾದ್ರೆ, ಹಿಂಗೆ ತಮ್ಮ ಮಕ್ಕಳಿಗೆ ಅಳಿಯದೀರ್‍ಗೆ ವಹಿಸುಬುಟ್ಟವ್ರೆ. ಅವರು 'ರೈಟ್' ಅಂದುದ್ದನ್ನ, ಇವರು ಮಾಡ್ತರೆ.

**ಈರಯ್ಯ** : ಅದು ಒಂಥರ ಸರಿಯೆ ಬುಡು. ಪಾಪ, ಒಬ್ಬರು ಎಷ್ಟು ಅಂತ ನೋಡೂಕಾದದು! ಇವರು ತಾನೆ ಇಡೀ ರಾಜ್ಯನೇ ಆಳಬೇಕಲ್ಲ.

(ಅಷ್ಟರಲ್ಲಿ ರಂಗದ ಎಡಬದಿಯಿಂದ ಮಂತ್ರಿಯ ಮಗ ಬಹಳ ದಿಮಾಕಿನಿಂದ ಬರುತ್ತಾನೆ. ಪುಟ್ಟಸ್ವಾಮಿ ಅವನಿಗೆ ನಿಂಬೆ ಹಣ್ಣನ್ನು ಕೊಟ್ಟು ಕೈ ಮುಗಿಯುತ್ತಾನೆ. ಈರಯ್ಯ ಮತ್ತು ರಮೇಶ ಕೈ ಮುಗಿಯುತ್ತಾರೆ. ಮಂತ್ರಿಯ ಮಗ ಖುರ್ಚಿಯಲ್ಲಿ ಆಸೀನನಾಗುತ್ತಾನೆ.)

**ಪುಟ್ಟಸ್ವಾಮಿ** : ನಿಮ್ಮ ತಂದೆಯವರ ನೋಡ್ದೊ. ಅವರು ನಿಮ್ಮ ಜೊತೇಲಿ ಮಾತಾಡಿ ಅಂದ್ರು.

**ಈರಯ್ಯ** : ನಾವು ನಿಮ್ಮ ಅಪ್ಪಾವರ್‍ಗೆ ಕಾಲದಿಂದ್ಲೂ ಓಟು ಹಾಕಿ, ಗೆಲ್ಲಿಸ್ಕೊಂಡು ಬಂದಿದ್ದೀವಿ ಸ್ವಾಮಿ. ನಿಮ್ಮಪ್ಪಾರು ಎತ್ತಗಾರ ಹೋಗ್ಲಿ. ಅತ್ತಗೆ ನಮ್ಮೂರೆಲ್ಲಾ. ಒಂದ್ಯೆದಾರು ಕುಳ ಬುಟ್ರೆ, ಇಡಿ ಊರೇ ನಿಮಗೆ ನಿಯ್ಯತ್ತಾಗದೆ ಸ್ವಾಮಿ.

**ಪುಟ್ಟಸ್ವಾಮಿ** : ಅವರು ಕಾಣ್ರೆ. ಅದ ಬಾಯ್ಬುಟ್ಟು ಒಂದ್ಸತಿ ಹೇಳ್ಬೇಕೆ? ಸ್ವಾಮಿ, ಇವರು ಈರಯ್ಯ ಅಂತ.... ಅವನು ರಮೇಶ ಅಂತ ಈರಯ್ಯನವರ ಮಗ.

**ಮಂತ್ರಿ ಮಗ** : ಏನು ಬಂದ್ರಿ?

**ಪುಟ್ಟಸ್ವಾಮಿ** : ಇವನ್ಗೆ ಇಂಟರ್ ವ್ಯೂ ಬಂದಿತ್ತು ಸ್ವಾಮಿ.

(ರಮೇಶನನ್ನು ಕುರಿತು)
ರಮೇಶ, ಆ ಕಾರ್ಡ್ ಕೊಡು ಸ್ವಾಮಿ ಅವರ ಕೈಗೆ. ಹಂಗೇನೆ ನಿನ್ನ ಮಾರ್ಕ್ಸ್ ಕಾರ್ಡ್, ರ್‍ಯಾಂಕ್ ಸರ್ಟಿಫಿಕೇಟು ಎಲ್ಲಾನು ತೋರ್‍ಸು....

(ರಮೇಶ ಮೊದಲು ಇಂಟರ್ ವ್ಯೂ ಕಾರ್ಡನ್ನು ಮಂತ್ರಿಯ ಮಗನಿಗೆ ನೀಡುತ್ತಾನೆ. ಅನಂತರ ತನ್ನ ಅಂಕಪಟ್ಟಿ, ರ್‍ಯಾಂಕ್ ಪ್ರಶಸ್ತಿ ಪತ್ರ

ಮುಂತಾದವುಗಳ ಕಟ್ಟನ್ನು ಆತನಿಗೆ ನೀಡುತ್ತಾನೆ. ಮಂತ್ರಿಯ ಮಗ ಒಂದೆರಡು ಕ್ಷಣ ಅವುಗಳ ಮೇಲೆ ಕಣ್ಣಾಡಿಸಿ, ಮತ್ತೆ ಹಿಂತಿರುಗಿಸುತ್ತಾನೆ.)

**ಪುಟ್ಟಸ್ವಾಮಿ** : ನಿಮ್ಮ ತಂದೆಯವರ ಕೈನಲ್ಲಿ ಸೆಲೆಕ್ಷನ್ ಕಮಿಟಿಯವರಿಗೆ ಒಂದು ಮಾತು ಹೇಳಿಸೋಣ ಅಂತ ಬಂದೊ ಸ್ವಾಮಿ.

**ಮಂತ್ರಿ ಮಗ** : ಬರಿ ಮಾತ್ಗೆಲ್ಲಾ ಕೆಲಸ ಸಿಗೂದಿಲ್ಲ ಕಣ್ರಿ ಈಗ.

**ಈರಯ್ಯ** : ಏನೊ ಸ್ವಾಮಿ, ತಾವು ದೊಡ್ಡ ಮನಸ್ಸು ಮಾಡುದ್ರೆ ಆಯ್ತದೆ.

**ಮಂತ್ರಿ ಮಗ** : ಈಗ ಒಂದೊಂದು ಸರ್ಕಾರಿ ನೌಕರಿಗೆ ಎಂಥಾ ಪೈಪೋಟಿ ಇರುತ್ತೆ ಅನ್ನೋದು ನಿಮಗೆ ಗೊತ್ತಾಗುದಿಲ್ಲ.

**ಪುಟ್ಟಸ್ವಾಮಿ** : ಇವರು ಹಳೇ ಕಾಲ್ದೋರು ಬುಡಿ ಸ್ವಾಮಿ. ಆ ಕಾಲ ಹೋಯ್ತು. ಈಗ ಸ್ವಲ್ಪ ಅಷ್ಟೊ ಇಷ್ಟೊ ಕೊಟ್ಬುಟ್ಟೆ ಕೆಲಸ ಮಾಡಿಸ್ಕೊಂಡು ಹೋಗೋಣ ಅಂತ ಬಂದಿದ್ದೀವಿ.

**ಮಂತ್ರಿ ಮಗ** : ನೀವು ನಮ್ಮೋರೆ ಅಲ್ವೆ. ನಿಮ್ಜೊತೇಲಿ ಎಂಥಾ ಮುಚ್ಚುಮರೆ. ಈಗ ನೀವು ಬಂದಿರೂ ಒಂದೊಂದು ಲೆಕ್ಚರರ್ ಪೋಸ್ಟಿಗೆ ಎಷ್ಟು ನಡೀತಾಯಿದೆ ಗೊತ್ತೆ?

**ಪುಟ್ಟಸ್ವಾಮಿ** : ಅದೇ ಮೂವತ್ತು ಸಾವಿರದಿಂದ ನಲವತ್ತರ ತನಕ ನಡೀತಾದೆ ಅಂತ ಕೇಳ್ದೆ.

**ಮಂತ್ರಿ ಮಗ** : ಎಲ್ಲಿದ್ದೀರಿ ನೀವು? ಒಂದರಿಂದ ಒಂದೂವರೆ ಲಕ್ಷದವರೆಗೆ ನಡೀತಾದೆ. ಅಷ್ಟು ಕೊಡ್ತೀವಿ ಅಂದ್ರು, ಕೆಲ್ಸ ಸಿಕ್ಕೇ ಸಿಗುತ್ತೆ ಅನ್ನೂ ಗ್ಯಾರಂಟಿಯಿಲ್ಲ.

**ಈರಯ್ಯ** : ಸ್ವಾಮಿ ನಾವು ರೈತಾಪಿ ಜನ. ಅಷ್ಟೊಂದು ಕೊಡೂಕಾಗೂದಿಲ್ಲ. ನೀವು ಹೆಂಗಾರ ಮಾಡಿ ಕಡಿಮೆ ಮಾಡಿಸ್ಬೇಕು.

**ಮಂತ್ರಿ ಮಗ** : ನೋಡಿ, ಎಲ್ಲಾ ಸಬ್ಜೆಕ್ಟ್ ಗಳು ಸೇರಿ ನೂರಿಪ್ಪತ್ತು ಲೆಕ್ಚರರ್ ಪೋಸ್ಟ್ಗಳನ್ನು ಕರೆದವ್ರೆ. ಇವುದರಲ್ಲಿ ನಮ್ಮ ತಂದೆ. ಅತಿ ಹೆಚ್ಚು ಅಂದ್ರೆ ಐದು ಪೋಸ್ಟಿಗೆ ಸ್ಟ್ರಾಂಗ್ ಆಗಿ ರೆಕ್ಮೆಂಡ್ ಮಾಡಬಹುದು ಅಷ್ಟೆ. ಈಗಾಗ್ಲೆ ನಾನು ನಾಲ್ಕಕ್ಕೆ ಒಪ್ಕೊಂಡು, ನಮ್ಮ ತಂದೆಯವರ ಮೂಲಕ ಸೆಲೆಕ್ಷನ್ ಕಮಿಟಿ ಮೆಂಬರ್

ಒಬ್ಬರಿಗೆ ಹೇಳಿದ್ದೀನಿ. ಆ ಮೆಂಬರ್ ನಮ್ಮೋರೆ. ನೀವೇನಾದ್ರು ಕೆಲ್ಸ ತಕೊಳ್ಳೇಬೇಕು ಅನ್ನು ಮನಸ್ಸಿದ್ರೆ, ಧೈರ್ಯ ಮಾಡಿ.

**ಪುಟ್ಟಸ್ವಾಮಿ** : ಈರಯ್ಯನೋರೆ, ಈಗ ಏನು ಅಂತ ಹೇಳಿ? ನಿಮ್ಮ ಧೈರ್ಯ.

**ಈರಯ್ಯ** : ಏನು ಅಂತ ಹೇಳನಪ್ಪ? ಒಂದು ಯವಾರ ಅಂತ ಕೈ ಹಾಕದ್ಮೇಲೆ, ಒಸಿ ಉದ್ದವೋ ತುಂಡವೋ ತುಯ್ಯಲೇ ಬೇಕಲ್ಲ.

**ಪುಟ್ಟಸ್ವಾಮಿ** : ಹಂಗಾದ್ರೆ ಕಮಿಟಿ ಮೆಂಬರ್ ಹತ್ರ ಹೋಗ್ಬುಟ್ಟು ಬರೋಣ ಬನ್ನಿ ಸ್ವಾಮಿ.

**ಮಂತ್ರಿ ಮಗ** : ನಾನು ಅಲ್ಲಿಗೆ ಬರೋದು ಬೇಡಿ. ಇಲ್ಲಿಂದ್ಲೆ ಫೋನ್ ಮಾಡ್ತೀನಿ. ಪುಟ್ಟಸ್ವಾಮಿ. ಸ್ವಲ್ಪ ಬನ್ನಿ ಈ ಕಡೆ.

(ಪುಟ್ಟಸ್ವಾಮಿಯನ್ನು ರಂಗದ ಬಲ ತುದಿಯತ್ತ ಕರೆದುಕೊಂಡು ಹೋಗಿ. ಪಿಸು ಮಾತುಗಳಲ್ಲಿ ಏನನ್ನೋ ಹೇಳತೊಡಗುತ್ತಾನೆ. ಅವನ ಮಾತುಗಳಿಗೆ ಪುಟ್ಟಸ್ವಾಮಿಯು ಒಪ್ಪಿಗೆಯನ್ನು ಸೂಚಿಸುವಂತೆ ತಲೆಯಾಡಿಸುತ್ತಾನೆ. ಅನಂತರ ಮಂತ್ರಿಯ ಮಗ ಅಲ್ಲಿಂದ ಹಿಂತಿರುಗಿ ಬಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾನೆ.)

**ಪುಟ್ಟಸ್ವಾಮಿ** : ಈರಯ್ಯನೋರೆ, ಸ್ವಲ್ಪ ಬನ್ನಿ ಇಲ್ಲಿ.

(ರಂಗದ ಎಡತುದಿಯತ್ತ ಕರೆದುಕೊಂಡು ಬಂದು, ಈರಯ್ಯನವರ ನಡುವಿನ ಕಡೆಗೆ ಕೈ ತೋರಿಸುತ್ತಾ)

ಅದರಲ್ಲಿ ಹದಿನೈದು ಸಾವಿರ ತೆಗೆದುಕೊಡಿ.

**ಈರಯ್ಯ** : ಇವರ್ಗೂ ಕೊಡಬೇಕೊ?

**ಪುಟ್ಟಸ್ವಾಮಿ** : ಆಮೇಲೆ ಎಲ್ಲಾನು ಹೇಳ್ತೀನಿ. ಈಗ ಕೊಡಿ.

(ಈರಯ್ಯನವರು, ತಮ್ಮ ನಡುವಿನಲ್ಲಿ ಕಟ್ಟಿದ್ದ ಹಣದ ಗಂಟಿನಿಂದ ಹದಿನೈದು ಸಾವಿರ ರೂಗಳನ್ನು ಎಣಿಸಿ ತೆಗೆದು, ಮತ್ತೆ ಗಂಟನ್ನು ಹಾಗೆಯೇ ಬಿಗಿದು ಕಟ್ಟಿ, ಮತ್ತೆ ನೋಟುಗಳನ್ನು ಎಣಿಸಿ, ನಂತರ)

**ಈರಯ್ಯ** : ತಕೊಪ್ಪ.

**ಪುಟ್ಟಸ್ವಾಮಿ** : ನೀವೇ ಕೊಡ್ಬನ್ನಿ.

(ಈರಯ್ಯನವರು ಬಹಳ ಭಯಭಕ್ತಿಯಿಂದ ಹದಿನೈದು ಸಾವಿರ ರೂಪಾಯಿಗಳನ್ನು ಮಂತ್ರಿಯ ಮಗನಿಗೆ ನೀಡುತ್ತಾರೆ.)

**ಮಂತ್ರಿ ಮಗ** : (ನೋಟುಗಳ ಕಂತೆಯನ್ನು ಕೈಯಲ್ಲಿ ಹಿಡಿದುಕೊಂಡು)
ಎಷ್ಟಿದೆ ಇಲ್ಲಿ?

**ಈರಯ್ಯ** : ಹದಿನೈದು ಸಾವಿರ ಅದೆ ಸ್ವಾಮಿ.
(ನೋಟುಗಳ ಕಟ್ಟನ್ನು ಎಣಿಸದೆ ಹಾಗೆಯೇ ಮೇಜಿನೊಳಗೆ ಇಟ್ಟ ಬಳಿಕ)

ಈ ದುಡ್ಡನ್ನ ನಾವೇ ಇಟ್ಕೊಳ್ತೀವಿ ಅಂತ ತಿಳ್ಕೊಬೇಡಿ.

**ಪುಟ್ಟಸ್ವಾಮಿ** : ಹಾಗೇನಿಲ್ಲ ಬುಡಿ ಸ್ವಾಮಿ, ನಮಗೆ ಗೊತ್ತಿದೆ ಎಲ್ಲ.

**ಮಂತ್ರಿಮಗ** : ಸ್ವಲ್ಪ ಇಲ್ಲೆ ಇರಿ, ನಾನು ಒಳಕ್ಕೆ ಹೋಗಿ ಕಮಿಟಿ ಮೆಂಬರ್ಗೆ ಫೋನ್ ಮಾಡಿ ಬರ್ತೀನಿ. ರಮೇಶ, ನಿನ್ನ ವಿವರ ಎಲ್ಲಾ ಕೊಡಯ್ಯ ಇಲ್ಲಿ.

(ರಮೇಶ ತನ್ನ ಕೈಯಲ್ಲಿದ್ದ ಇಂಟರ್ ವ್ಯೂ ಕಾರ್ಡು ಮತ್ತು ಇತರ ವಿವರಗಳ ಕಟ್ಟನ್ನೇ ಮಂತ್ರಿಯ ಮಗನ ಹಸ್ತ ನೀಡುತ್ತಾನೆ. ಮಂತ್ರಿಯ ಮಗ ರಂಗದ ಬಲಬದಿಯಿಂದ ನೇಪಥ್ಯಕ್ಕೆ ನಡೆಯುತ್ತಾನೆ.)

**ಈರಯ್ಯ** : ದುಡ್ಡ ಈಸ್ಕೊಂಡುದ್ದು ನಮಗಲ್ಲ ಅಂತಾರೆ, ಇನ್ಯಾರ್ಗೆ ಕೊಟ್ಟರು?

**ಪುಟ್ಟಸ್ವಾಮಿ** : ಪಾರ್ಟಿ ಫಂಡು ಅಂತ ಹಿಂಗೆ ಕಲೆಕ್ಟ್ ಮಾಡ್ತಾರೆ.

**ಈರಯ್ಯ** : ಹಂಗಂದ್ರೆ?

**ಪುಟ್ಟಸ್ವಾಮಿ** : ಎಂ.ಎಲ್.ಎ. ಆಗ್ಬೇಕು, ಎಂ.ಪಿ. ಆಗ್ಬೇಕು ಅಂತ ಚುನಾವಣೆಗೆ ನಿಂತ್ಕೊತರಲ್ಲ, ಅವರಿಗೆ ಪಾರ್ಟಿಯಿಂದ ಎಲೆಕ್ಷನ್ ಖರ್ಚಿಗೆ ಅಂತ ಲಕ್ಷ ಲಕ್ಷ ಕೊಡ್ತಾರೆ. ಅದಕ್ಕೆ ಈಗಿನಿಂದ್ಲೆ ಕೆಲಸ ಕೇಳ್ಕೊಂಡು ಬಂದೋರ್ತಾವೆಲ್ಲ ದುಡ್ಡು ಎತ್ತರೆ.

**ಈರಯ್ಯ** : ಎಲೆಕ್ಷನ್ ಟೇಮಲ್ಲಿ ಆಪಾಟಿ ಸರಾಪನ ಪೊಟ್ಲೆ, ಬಾಟ್ಲು, ಬಾಡು, ದುಡ್ಡು ಎಲ್ಲಾನು ಹಂಚತರಲ್ಲ, ಇವರ್ತಾನೆ ಇನ್ನೆಲ್ಲಿಂದ ತಂದರು?
(ಅಷ್ಟರಲ್ಲಿ ಮಂತ್ರಿಯ ಮಗ ಬರುತ್ತಿರುವುದನ್ನು ಕಂಡ ರಮೇಶ)

**ರಮೇಶ** : ಬತ್ತಾವ್ರೆ, ಸುಮ್ನಿರಪ್ಪ.
(ಮಂತ್ರಿಯ ಮಗ ರಂಗದ ಬಲಬದಿಯಿಂದ ಬರುತ್ತಾನೆ. ರಮೇಶನ ವಿವರಗಳಿದ್ದ ಕಟ್ಟನ್ನು ಮತ್ತೆ ರಮೇಶನ ಕೈಗೆ ನೀಡಿ, ಈರಯ್ಯನವರನ್ನು ಕುರಿತು)

**ಮಂತ್ರಿ ಮಗ** : ಕಮಿಟಿ ಮೆಂಬರ್ ಸಿಕ್ಕಿದ್ರು, ಎಲ್ಲಾ ಡೀಟೈಲಾಗಿ ಹೇಳಿದ್ದೇನೆ. ನಿಮ್ಮ ಹುಡುಗನ ಹೆಸರು, ಇಂಟರ್ ವ್ಯೂ ಕಾರ್ಡ್ ನಂಬರ್, ಎಲ್ಲಾನು ಅವರ ಡೈರಿಗೆ ಗುರುತು ಹಾಕೊಂಡ್ರು. ನಿಮ್ಮನ್ನ ನಮ್ಮ ಕಡೆಯವರು, ನಮ್ಮ ಜಾತಿಯವರು, ನಮ್ಮ ತಂದೆಗೆ ಬಹಳ ಬೇಕಾದವರು ಅಂತ್ಲೆ ಹೇಳಿದ್ದೇನೆ. ಈಗ್ಲೆ ಹೋಗಿ ನೀವು ಅವರನ್ನ ನೋಡಿ.

**ಪುಟ್ಟಸ್ವಾಮಿ** : ನಾನು ಹೋಗಿ ನೋಡ್ತೀನಿ ಬಿಡಿ ಸ್ವಾಮಿ.

**ಮಂತ್ರಿ ಮಗ** : ನೀವು ಬೇಡಿ, ಅವರ್ಗೆ ಮೂರನೆ ಪಾರ್ಟಿ ಅಂದ್ರೆ ಆಗೂದಿಲ್ಲ.
(ಈರಯ್ಯನವರತ್ತ ಕೈ ತೋರಿಸುತ್ತಾ)
ಹುಡುಗನ ತಂದೆ, ಇವರ್ನೆ ಕಳ್ಸಿ, ಹುಡುಗನೂ ಬೇಡ, ಇವರೊಬ್ಬರೇ ಹೋಗ್ಲಿ.

**ಮಂತ್ರಿ ಮಗ** : ನೀವೇನೂ ಹಿಂಜರಿಯಬೇಡಿ. ಬಹಳ ಒಳ್ಳೆಯವರು ಅವರು. ನೇರವಾಗಿ ಮಾತನಾಡಿ, ಸ್ವಲ್ಪ ಹೆಚ್ಚು ಕಮ್ಮಿ ಒಪ್ಕೊಳಿ. ನಮ್ಮ ತಂದೆನೂ ಇವತ್ತೆ ಅವರಿಗೆ ಪೋನ್ ಮಾಡಿ ಹೇಳ್ತಾರೆ. ಪುಟ್ಟಸ್ವಾಮಿ, ನಿಮಗೆ ಅವರ ಮನೆ ಅಡ್ರೆಸ್ ಗೊತ್ತಲ್ವೆ?

**ಪುಟ್ಟಸ್ವಾಮಿ** : ನನ್ತಾವು ಅದೆ ಸ್ವಾಮಿ.

**ಮಂತ್ರಿ ಮಗ** : ನೀವೇನು ಆಲೋಚನೆ ಮಾಡ್ಬೇಡಿ, ಧೈರ್ಯವಾಗಿ ಎಷ್ಟು ಬೇಕಾದ್ರು ದುಡ್ಡು ಕೊಡಿ. ಒಂದು ವೇಳೆ ಕೆಲಸ ಆಗ್ದೆ ಹೋದ್ರೆ, ನಿಮ್ಮ ದುಡ್ಡನ್ನ ಪೂರ್ತಾ ಹಿಂದಿರುಗಿಸ್ತಾರೆ. ನೀವು ಅವರಿಗೆ ಕೊಡುವ ದುಡ್ಡಿಗೆ ನಾನು ಗ್ಯಾರಂಟಿ.

**ಪುಟ್ಟಸ್ವಾಮಿ** : ಇದೇನ್ ಸ್ವಾಮಿ ಹಿಂಗಂತೀರಿ! ಹಂಗಿಲ್ದೇದ್ರೆ ನೀವು ನಮ್ಮನ್ನ ಅವರ ಹತ್ರಕ್ಕೆ ಕಳಿಸ್ತಿದ್ರಿ. ಹೋಗ್ಬತ್ತೀವಿ ಸ್ವಾಮಿ.

**ಮಂತ್ರಿಮಗ** : ಹೋಗ್ಬನ್ನಿ, ಒಳ್ಳೇದಾಗಲಿ....
(ಮೂವರು ನಮಸ್ಕರಿಸುತ್ತಾರೆ. ಅವರೆಲ್ಲರ ನಮಸ್ಕಾರಗಳನ್ನು ಸ್ವೀಕರಿಸುತ್ತಾ, ಮಂತ್ರಿಯ ಮಗ ರಂಗದ ಬಲಬದಿಯಿಂದ ನೇಥ್ಯಕ್ಕೆ ಸರಿಯುತ್ತಾನೆ. ಮೂವರು ನಿಧಾನವಾಗಿ ಅಲ್ಲಿಂದ ಹೊರಡುತ್ತಿದ್ದಂತೆಯೇ)

**ರಮೇಶ** : (ಸ್ವಲ್ಪ ಮೆಲ್ಲನೆಯ ಧ್ವನಿಯಲ್ಲಿ)....
ಹಿಂಗೆಲ್ಲಾ ಉದ್ದಕ್ಕೂ ದುಡ್ಡು ಸುರ್ಕೊಂಡು ಕೆಲಸ ತಕೊಳೂದು ನಂಗ್ಯಾಕೋ ಸರಿ ಕಾಣ್ತಿಲ್ಲ.

**ಪುಟ್ಟಸ್ವಾಮಿ** : ಇದೇನಯ್ಯ? ಇಲ್ಲೀಗಂಟ ಬಂದಾದ್ಮೇಲೆ ಹಿಂಗಂತಿ! ಊರಲ್ಲೆ ಈ ಮಾತ ನೀನು ಹೇಳಿದ್ರೆ, ನಾವೆಲ್ಲ ಅಲ್ಲೆ ಇರ್ತೊದಾಗಿತ್ತು. ಇಂಟರ್ ವ್ಯೂ ದಿವಸ ನೀನೊಬ್ಬನೆ ಬಂದೋಗಿದ್ರೆ ಆಯ್ತಿತ್ತು.

**ಈರಯ್ಯ** : ಹಂಗೆ ಬರಿ ಕೈಲಿ ಬಂದೋದ್ರೆ ನಿಂಗೆ ಕೆಲ್ಸ ಇಡ್ರಿಸ್ಬುಟ್ಟರೆ?

**ಪುಟ್ಟಸ್ವಾಮಿ** : ಬರಿ ಕೈಲಿ ಬಂದೋದ್ರೆ, ಇನ್ನು ಹತ್ತು ವರ್ಷ ಕಾದ್ರು ಗೌರ್ಮೆಂಟ್ ಚಾಕ್ರಿ ಸಿಕ್ಕೂದಿಲ್ಲ.

**ರಮೇಶ** : ಹಂಗಲ್ಲ ಪುಟ್ಟಸ್ವಾಮಣ್ಣ. ಮೊದಲು ಇಪ್ಪತ್ತೊ, ಮೂವತ್ತೊ ಆಗ್ಬೋದು ಅಂತಿದ್ರಿ, ಆಮೇಲೆ, ಬೆಂಗಳೂರ್ಗೆ, ಒಂದ್ಸತಿ ಹೋಗ್ಬಂದ್ಮೇಲೆ ನಲವತ್ತೊ ಐವತ್ತೊ ಆಯ್ತದೆ ಅಂದ್ರಿ. ಈಗ ನೋಡುದ್ರೆ, ಲಕ್ಷದ ಮೇಲೆ ಆಗುವಂಗೆ ಕಾಣ್ತಾದೆ.

**ಈರಯ್ಯ** : ರಮೇಶ, ನೀನು ಸುಮ್ನೆ ನಡಿ, ನೀರಲ್ಲಿ ಇಳುದ್ಬುಟ್ಟಾಗದೆ, ಹೆಂಗೊ ಅತ್ತಗೆ ದಡ ಸೇರ್ಕೊವ.

**ರಮೇಶ** : ಹಂಗಲ್ಲ ಕಣಪ್ಪ.

**ಈರಯ್ಯ** : ಇನ್ನೆಂಗ್ಲ? ಊರಲ್ಲಿ ನಿಮ್ಮಣ್ಣಂದಿರು ಇಬ್ಬರು ಆಗ್ಲೆ ನೆಲ ಕೆರೀತಾವ್ರೆ. ಅವರ್ಜೊತೇಗೆ ನೀನು ನೆಲ ಕೆರಿದೀಯ? ನಡೀಲಾ ಸುಮ್ಮನೆ. ಹೊಟ್ಟೆ ಬಟ್ಟೆ ಕಟ್ಟಿ,

ದುಡ್ಡು ಕೊಡೋನು ನಾನು. ಹೆಂಗೊ ಒಂದು ಒಳ್ಳೆ ಜಾಗ ಸೇರ್ಕೊದ ನೋಡು.

**ಪುಟ್ಟಸ್ವಾಮಿ** : ರಮೇಶ, ನೀನು ಇನ್ನು ಹುಡುಗ, ಇಂತಾದ್ನೆಲ್ಲ ಈಗ ಕಣ್ಬುಟ್ಟು ನೋಡ್ತಾ ಇದ್ದೀಯೆ. ಅದ್ಕೆ ಹಿಂಗೆ ಅನ್ಸುತ್ತೆ.
(ನಿಟ್ಟುಸಿರು ಬಿಡುತ್ತ)
ಬೇಲಿಯೆ ಎದ್ದು ಹೊಲ ಮೇಯ್ತಿರುವಾಗ, ನೀನು ನಾನು ಏನು ಮಾಡೂಕಾದದಪ್ಪ? ಸಿಕ್ಕಿರೂ ಅವಕಾಶ ಕಳ್ಕೊಬಾರದು, ಸುಮ್ನೆ ಬಾ.
(ರಮೇಶ ಸುಮ್ಮನಾಗುತ್ತಾನೆ)

**ಈರಯ್ಯ** : ಈಗ ನಡೀರಪ್ಪ ಬೇಗ ಬೇಗ. ಅವರ ಮನೇತಕೆ ಹೋಗ್ಮ. ಇನ್ನೆತ್ತಗಾರ ಹೊಂಟ್ಗಿಂಟೋದರು.
(ಅವರು ರಂಗದ ಬಲಬದಿಯಿಂದ ನೇಪಥ್ಯಕ್ಕೆ ಸರಿಯುತ್ತಿದ್ದಂತೆಯೇ, ರಂಗದ ಮೇಲೆ ಕತ್ತಲು ಆವರಿಸುತ್ತದೆ. ಸ್ವಲ್ಪ ಸಮಯದ ನಂತರ ಮತ್ತೆ ರಂಗದ ಮೇಲೆ ಬೆಳಕು ಮೂಡಿದಾಗ, ಕಮಿಟಿ ಮೆಂಬರ್ ಅವರ ಮನೆಯಲ್ಲಿನ ಕೊಠಡಿಯ ದೃಶ್ಯ. ಕುರ್ಚಿಯೊಂದರಲ್ಲಿ ಮೆಂಬರ್ ಕುಳಿತಿದ್ದಾರೆ. ಈರಯ್ಯನವರು ಅಲ್ಲಿಗೆ ರಂಗದ ಎಡಬದಿಯಿಂದ ಬರುತ್ತಾರೆ.)

**ಈರಯ್ಯ** : ನಮಸ್ಕಾರ ಬುದ್ಧಿ.

**ಮೆಂಬರ್** : ನಮಸ್ಕಾರ, ಏನು ಬಂದ್ರಿ?

**ಈರಯ್ಯ** : ಈಗ್ತಾನೆ ಮಂತ್ರಿಗಳ ಮಗಾರು ತಮಗೆ ಫೋನ್ ಮಾಡಿದ್ದೀನಿ, ಹೋಗಿ ನೋಡು ಅಂದ್ರು.
(ಕೈಯಲ್ಲಿದ್ದ ಮಗನ ಇಂಟರ್ ವ್ಯೂ ಕಾರ್ಡನ್ನು ಮತ್ತು ವಿಳಾಸ, ಅಂಕಪಟ್ಟಿ, ರ್‍ಯಾಂಕ್ ಪ್ರಶಸ್ತಿಯ ವಿವರಗಳನ್ನೊಳಗೊಂಡ ಹಾಳೆಯೊಂದನ್ನು ಅವರಿಗೆ ಈರಯ್ಯ ನೀಡುತ್ತಾರೆ. ಅವರು ಅದರ ಮೇಲೆ ಕ್ಷಣ ಕಾಲ ಕಣ್ಣಾಡಿಸಿ)

**ಮೆಂಬರ್** : ನಿಮ್ಮ ಮಗ ಇಂಟರ್ ವ್ಯೂ ನಲ್ಲಿ ಚೆನ್ನಾಗಿ ಮಾಡ್ಲಿ, ನೋಡೋಣ.
(ಕಾರ್ಡ್ ಮತ್ತು ಹಾಳೆಯನ್ನು ಮತ್ತೆ ಈರಯ್ಯನಿಗೆ ಹಿಂದಿರುಗಿಸುತ್ತಾರೆ.)

**ಈರಯ್ಯ** : ಅದಕ್ಕುಂಚೆ ನಿಮ್ತಾವು ಸ್ವಲ್ಪ ಮಾತಾಡ್ಕೊಂಡು ಬಾ ಅಂದ್ರು ಬುದ್ಧಿ.

**ಮೆಂಬರ್** : ಈಗ ಮಾತಾಡ್ತಾನೇ ಇದ್ದೀರಲ್ಲ, ಇನ್ನೇನು?

**ಈರಯ್ಯ** : ಹಂಗಲ್ಲ ಬುದ್ಧಿ, ಕೆಲ್ಸ ತಕೊಬೇಕಾದ್ರೆ ಸ್ವಲ್ಪ ದುಡ್ಡು ಖರ್ಚಾಗುತ್ತೆ ಅಂತ ಹೇಳುದ್ರು.

**ಮೆಂಬರ್** : ಯಾರು ಹೇಳುದ್ರು?

**ಈರಯ್ಯ** : ಮಂತ್ರಿ ಮಗಾರೆ ಹೇಳಿ ಕಳ್ಸುದ್ರು ಬುದ್ಧಿ.

**ಮೆಂಬರ್** : ನೋಡಿ, ನಿಮ್ಮ ಹುಡುಗ ತೆಗೆದುಕೊಂಡಿರುವ ನಂಬರ್ಗೆ, ದುಡ್ಡು ಕೊಟ್ರು, ಖಂಡಿತ ಈ ಕೆಲಸ ಸಿಗೂದಿಲ್ಲ .

**ಈರಯ್ಯ** : ಯಾಕ್ ಬುದ್ಧಿ? ನನ್ನ ಮಗ ಮೂರನೇ ರ್ಯಾಂಕ್‌ನಲ್ಲಿ ಪಾಸ್ ಮಾಡವ್ನೆ. ಚಿನ್ನದ ಪದಕ ಎರಡು ಬಂದವೆ.

**ಮೆಂಬರ್** : ನಿಮ್ಮ ಮಗ ಒಬ್ಬನೇ ಅಲ್ಲ ರ್ಯಾಂಕ್ ಬಂದು, ಚಿನ್ನದ ಪದಕ ಪಡೆದಿರೋನು. ನಮ್ಮ ರಾಜ್ಯದಲ್ಲಿ ಆರು ಯೂನಿವರ್ಸಿಟಿಗಳಿವೆ. ಐದಾರು ವರ್ಷದಿಂದಲೂ ರ್ಯಾಂಕ್ ಪಡೆದು, ಚಿನ್ನದ ಪದಕ ಗಳಿಸಿರೂರು ಹತ್ತಾರು ಮಂದಿ ಕೆಲಸವಿಲ್ಲದೆ ಅಲೀತಾವ್ರೆ. ಈಗ ಅವರೆಲ್ಲಾ ಅಪ್ಲೈ ಮಾಡ್ಕೊಂಡವ್ರೆ. ಒಟ್ಟು ನೂರಿಪ್ಪತ್ತು ಲೆಕ್ಚರರ್ ಪೋಸ್ಟ್ ಳಲ್ಲಿ, ಕನ್ನಡ ಅಧ್ಯಾಪಕರ ಹುದ್ದೆ ಆರು ಇವೆ. ಆರಕ್ಕೆ ಅರವತ್ತು ಜನ ಇಂಟರ್ ವ್ಯೂಗೆ ಬರ್ತಾವ್ರೆ. ಈಗ ನೀವೇ ಹೇಳಿ ಇವರಲ್ಲಿ ಯಾರಿಗೆ ಕೆಲಸ ಕೊಡೋಣ?

**ಈರಯ್ಯ** : ಹಿಂಗೆಲ್ಲಾ ಹೇಳ್ಬೇಡಿ, ಬುದ್ಧಿ, ನಿಮ್ಮ ಪಾದ ಅಂತೀನಿ. ನನ್ನ ಮಗನಿಗೆ ಮಾತ್ರ ಹೆಂಗಾದ್ರು ಮಾಡಿ ನೀವು ಕೆಲಸ ಕೊಡ್ಲೇಬೇಕು ಬುದ್ಧಿ.

**ಮೆಂಬರ್** : ಹೇಗೆ ಕೊಡೂದು ನೀವೇ ಹೇಳಿ?

**ಈರಯ್ಯ** : ಅದೇನೊ ಎಲ್ಲಾ ತಮಗೆ ಬುಟ್ಟುದ್ದು ಬುದ್ಧಿ. ನಮ್ಮಂಥ ಮೂಢಾತ್ಮರಿಗೆ ಇವೆಲ್ಲ ಏನು ತಾನೆ ಗೊತ್ತಾದದು? ಏನೊ ಒಂದಿಷ್ಟು ದುಡ್ಡು ಅಂತ ತಾವು ಬಾಯ್ಬುಟ್ಟು ಹೇಳುದ್ರೆ, ಕಷ್ಟವೊ ಸುಖವೊ ಹೆಂಗೊ ಜೊತೆ ಮಾಡಿ ಕೊಡ್ತೀನಿ ಬುದ್ಧಿ.

(ಸ್ವಲ್ಪ ಸಮಯ ಆಲೋಚಿಸುತ್ತಿದ್ದ ಮೆಂಬರ್ ಅವರು, ಅನಂತರ)

**ಮೆಂಬರ್** : ನೋಡಿ, ನೀವು ಒಂದು ಲಕ್ಷ ರೂಪಾಯಿ ಜೊತೆ ಮಾಡೂದಾದ್ರೆ, ನಾನು ಉಳಿಕೆ ಮೆಂಬರ್ಸ್‌ಗೆ, ಛೇರ್ಮನ್ನರಿಗೆ ಹೇಳ್ಕೊಂಡು ಸ್ವಲ್ಪ ಪ್ರಯತ್ನ ಮಾಡ್ತೇನೆ.

**ಈರಯ್ಯ** : ಒಂದು ಲಕ್ಷವ ಬುದ್ಧಿ!

**ಮೆಂಬರ್** : ಯಾಕೆ ಬೆಚ್ಚುಬಿಟ್ರಲ್ಲ? ಇದೇ ಹುದ್ದೆಗೆ ಎರಡು ಲಕ್ಷ ಕೊಡುವವರು ಇದ್ದಾರೆ.

**ಈರಯ್ಯ** : ಕೊಡೂರಿಲ್ಲ ಅಂತ ನಾ ಹೇಳೂದಿಲ್ಲ ಬುದ್ಧಿ. ಆದ್ರೆ ನಾನು ಅಷ್ಟರೋನಲ್ಲ. ನನ್ ಮಕ್ಕಳಲ್ಲಿ ಇನ್ನ್ಯಾರು ಅಕ್ಷರ ಕಲೀಲಿಲ್ಲ ಬುದ್ಧಿ. ಇವನೊಬ್ಬ ಓದೂದರಲ್ಲಿ ಮುಂದಕ್ಕೆ ಬಂದಿದ್ದ. ಅದಕ್ಕೆ ಇವನ ಒಂದು ತಿಟ್ಟು ಹತ್ತಿಸ್ಬುಡವಾ ಅಂತ ಇಷ್ಟು ಹೋರಾಡ್ತಿವ್ನಿ. ಸ್ವಲ್ಪ ಕಮ್ಮಿ ಮಾಡ್ಕೊಳಿ ಬುದ್ಧಿ.

**ಮೆಂಬರ್** : ನೀವು ಕೊಡುವ ದುಡ್ಡೆಲ್ಲಾ ನನಗೊಬ್ಬನಿಗೆ ಸೇರ್‍ತದೆ ಅಂತ ತಿಳ್ಕೊಬೇಡಿ.

**ಈರಯ್ಯ** : ಅದೇನೊ ಬುದ್ಧಿ, ಅವೆಲ್ಲ ನಂಗೊತ್ತಾಗೂದಿಲ್ಲ. ಈಗ ನೀವು ಮಾತ್ರ ಸ್ವಲ್ಪ ಕರುಣೆ ತೋರಿಸ್ಲೇಬೇಕು.

**ಮೆಂಬರ್** : ಹೋಗ್ಲಿ. ಎಪ್ಪತ್ತೈದು ಸಾವಿರ ಕೊಡಿ. ನೋಡೋಣ, ನನ್ನ ಕೈಲಾದ ಪ್ರಯತ್ನ ಮಾಡ್ತೇನೆ.

**ಈರಯ್ಯ** : ಗ್ಯಾರಂಟಿಯಾಗಿ ಕೆಲಸ ಕೊಡ್ತೀನಿ ಅನ್ನಿ ಬುದ್ಧಿ....

(ತನ್ನ ನಡುವಿನ ಕಡೆ ಕೈ ಹಾಕುತ್ತ).
ಇವತ್ತು ಸ್ವಲ್ಪ ಮುಂಗಡ ಕೊಡ್ತೀನಿ, ತಕೊಬೇಕು ಬುದ್ಧಿ.

**ಮೆಂಬರ್** : ಎಷ್ಟು ತಂದಿದ್ದೀರಿ?

**ಈರಯ್ಯ** : ಇಪ್ಪತ್ಮೂರು ಸಾವಿರ ಅದೆ ಬುದ್ಧಿ, ಉಳುದುದ್ದನ್ನು ಇನ್ನೊಂದು ನಾಲ್ಕು ದಿನದಲ್ಲಿ ತಂದು ಒಪ್ಪಿಸ್ತೀನಿ. ನನ್ನ ಮಗನ್ನ ಮಾತ್ರ ಕೈ ಬುಡಬ್ಯಾಡಿ ಬುದ್ಧಿ.

(ನಡು ಕಟ್ಟಿನಿಂದ ಹಣವನ್ನು ತೆಗೆದು, ನೋಟಿನ ಕಟ್ಟುಗಳನ್ನು ಬಹಳ ಭಯಭಕ್ತಿಯಿಂದ ಕೊಡುತ್ತಾ)

ಎಣಿಸ್ಕೊಳಿ ಬುದ್ಧಿ.

**ಮೆಂಬರ್** : ಪರವಾಗಿಲ್ಲ ಬಿಡಿ.
(ನೋಟಿನ ಕಟ್ಟುಗಳನ್ನು ಎತ್ತಿ ತೋರಿಸುತ್ತಾ)
ನೋಡಿ, ನಿಮ್ಮ ದುಡ್ಡು ನನಗೆ ವಿಷ ಇದ್ದಂಗೆ. ಈಗ ಇದನ್ನು ಕೈಯಲ್ಲಿ ಮುಟ್ಟಿದ್ದೇನೆ ಅಷ್ಟೆ. ನಿಮ್ಮ ಕೆಲಸ ಆದ್ರೆ, ಇದು ನನ್ನದು; ಕೆಲಸ ಆಗಲಿಲ್ಲವೇ, ಇದೇ ನೋಟುಗಳ ಕಟ್ಟನ್ನು ನಾನು ನಿಮಗೆ ಹಿಂತಿರುಗಿಸ್ತೇನೆ.

**ಈರಯ್ಯ** : ನಿಮ್ಮ ದಮ್ಮಯ್ಯ ಅಂತೀನಿ, ದುಡ್ಡ ಹಿಂದಕ್ಕೆ ಕೊಡಬ್ಯಾಡಿ ಬುದ್ಧಿ. ಮಂತ್ರಿ ಮಗಾರು ಆಗ್ಲೆ ಹೇಳಿದ್ರು, ನೀವು "ಬೋ ಕಂಡೀಸನ್ನು" ಅಂತ. ಹೆಂಗಾದ್ರು ಮಾಡಿ, ನನ್ನ ಮಗನಿಗೆ ಗೌರ್ಮೆಂಟ್ ಚಾಕ್ರಿ ಕೊಡ್ಲೇಬೇಕು ಬುದ್ಧಿ.

**ಮೆಂಬರ್** : ಬಾಕಿ ಹಣವನ್ನು ಇನ್ನು ನಾಲ್ಕು ದಿನದಲ್ಲಿ ತಂದು ಕೊಡಿ.

**ಈರಯ್ಯ** : ಖಂಡಿತ ತತ್ತೀನಿ ಬುದ್ಧಿ.

**ಮೆಂಬರ್** : ಒಳ್ಳೇದಾಗ್ಲಿ ಬನ್ನಿ. ನನ್ನ ಕೈಲಾದ ಪ್ರಯತ್ನ ಮಾಡ್ತೇನೆ.
(ಈರಯ್ಯನವರು ಮೆಂಬರ್ ಅವರಿಗೆ ನಮಸ್ಕರಿಸಿ, ರಂಗದ ಬಲಬದಿಯಿಂದ ತೆರಳುತ್ತಿದ್ದಂತೆಯೇ, ರಂಗದ ಮೇಲೆ ಕತ್ತಲು ಆವರಿಸುತ್ತದೆ. ಸ್ವಲ್ಪ ಸಮಯದ ನಂತರ ರಂಗದ ಮೇಲೆ ಬೆಳಕು ವ್ಯಾಪಿಸುತ್ತದೆ. ಬೆಂಗಳೂರು ಸರ್ಕಾರಿ ಬಸ್ ನಿಲ್ದಾಣದ ದೃಶ್ಯ. ಈರಯ್ಯ ಮತ್ತು ಪುಟ್ಟಸ್ವಾಮಿ ಮಾತನಾಡುತ್ತ ಊರಿಗೆ ಹಿಂತಿರುಗಲೆಂದು ಬಸ್ಸಿಗಾಗಿ ಕಾಯುತ್ತ ನಿಂತಿದ್ದಾರೆ.)

**ಪುಟ್ಟಸ್ವಾಮಿ** : ಅದ್ಸರಿ, ಇನ್ನು ನಾಲ್ಕು ದಿನದಲ್ಲಿ ಅಷ್ಟೊಂದು ದುಡ್ಡು ಎಲ್ಲಿ ಜೊತೆ ಮಾಡ್ತೀರಿ

**ಈರಯ್ಯ** : ಏರಿ ಕೆಳಗಿನ ಗದ್ದೆ ಒಂದು ಎಕರೆಯ "ಮಾರ್ತೀನಿ" ಅಂದ್ರೆ, ಊರಲ್ಲಿ ಯಾರಾದ್ರು "ನಾ ಮುಂದು, ತಾ ಮುಂದು" ಅಂತ ದುಡ್ಡು ಕೊಡ್ತಾರೆ.

**ಪುಟ್ಟಸ್ವಾಮಿ** : ಚಿನ್ನದಂಥ ಗದ್ದೆ ಮಾರ್ಬುಡ್ತೀರಾ?

**ಈರಯ್ಯ** : ಇನ್ನೇನು ಮಾಡಿಯೆ? ಹೆಂಗೊ ಇವನ್ಗೆ ಒಂದು ದಾರಿ ಅಂತ ಆಯ್ತುದಲ್ಲ.

**ಪುಟ್ಟಸ್ವಾಮಿ** : (ಅತ್ತ ಇತ್ತ ನೋಡುತ್ತಾ)
ಇದೇನು? ಇಷ್ಟೊತ್ತಾದ್ರು ನಮ್ಮ ಕಡೆ ಬಸ್ಸೆ ಬರ್ಲಿಲ್ವಲ್ಲ. ಇಷ್ಟು ದಿನ ನಾಲ್ಕೈದು ಬಸ್ಸು ಒಂದರ ಪಕ್ಕ ಒಂದು ನಿಂತ್ಕೊತಿದ್ದೊ.

**ಈರಯ್ಯ** : ಬರ್ಲಿ ಬುಡು, ಈಗೇನು ಆತ್ರ? ಹೆಂಗೊ ಬಂದ ಕೆಲಸ ಆಯ್ತಲ್ಲ.

**ಪುಟ್ಟಸ್ವಾಮಿ** : ಅದು ನಿಜವೇ ಅನ್ನಿ. ಒಂದೊಂದು ದಿವ್ಸ, ಯಾರ್ ಮನೇತಕೆ ಹೋದ್ರು, ಯಾವ ಆಫೀಸ್ತಕೆ ಹೋದ್ರು "ಅಲ್ಲೋಗವ್ರೆ-ಇಲ್ಲೋಗವ್ರೆ" ಅಂತರೆ. ಒಬ್ಬರೂ ಸಿಗೂದಿಲ್ಲ.

**ಈರಣ್ಣ** : (ಸುತ್ತಲೂ ನೋಡುತ್ತಾ, ರಮೇಶನನ್ನು ಕಾಣದೆ)
ಇವನು ಎತ್ತಗ್ಹೋದ?

**ಪುಟ್ಟಸ್ವಾಮಿ** : "ಬಸ್ಸು ಎಷ್ಟೊತ್ಗೆ ಇದ್ದದು, ಕೇಳ್ಕೊಂಡು ಬತ್ತೀನಿ" ಅಂತ ಹೋಗವ್ನೆ. ಅಗೋ, ಅಲ್ಲೆ ಬತ್ತಾವ್ನಲ್ಲ.
(ಅಲ್ಲಿಗೆ ಬರುತ್ತಿರುವ ರಮೇಶ ಗಾಬರಿಗೊಂಡಿದ್ದಾನೆ. ತನ್ನ ಜೇಬುಗಳನ್ನೆಲ್ಲಾ ಮತ್ತೆ ಮತ್ತೆ ಒಳಗೆ ಮತ್ತು ಹೊರಗೆ ಮುಟ್ಟಿ ನೋಡಿಕೊಳ್ಳುತ್ತಾ, ಅವುಗಳ ಒಳಕ್ಕೆ ಕೈ ಹಾಕಿ ತಡಕಾಡುತ್ತಿದ್ದಾನೆ.)

**ಪುಟ್ಟಸ್ವಾಮಿ** : ಏನು ರಮೇಶ, ಹಿಂಗೆ ಹುಡುಕಾಡುತ್ತ ಇದ್ದೀಯೆ?

**ಈರಯ್ಯ** : ಏನಪ್ಪ? ಏನಾರ ಕಡೀಕೊಂಡ?
(ಇವರ ಪ್ರಶ್ನೆಗಳಿಗೆ ಉತ್ತರ ನೀಡದೆ, ರಮೇಶ ಮತ್ತೆ ತನ್ನ ಜೇಬುಗಳ ಒಳಗೆ ಕೈಹಾಕಿ ತಡಕಾಡುತ್ತಾ, ನೆಲವನ್ನೇ ನೋಡುತ್ತಾ ಪುನಃ ಸ್ವಲ್ಪ ದೂರ ಹಿಂದಕ್ಕೆ ಹೋಗಿ, ಮತ್ತೆ ಬರುತ್ತಾನೆ)

**ಈರಯ್ಯ** : ಏ...ಅದೇನ ಹಂಗೆ ಹುಡುಕ್ತನೇ ಇದ್ದೀಯೇ?

**ಪುಟ್ಟಸ್ವಾಮಿ** : ದುಡ್ಡು ಗಿಡ್ಡು ಬೀಳಿಸ್ಕೊಂಡೇನಯ್ಯ?

**ರಮೇಶ** : ಬಿದ್ದೋಗಿಲ್ಲ, ಯಾರೊ ಜೇಬ್ಗೆ ಬ್ಲೇಡ್ ಹಾಕ್ಬುಟ್ಟು, ದುಡ್ಡು ಎತ್ಬುಟ್ಟವ್ರೆ.

**ಈರಯ್ಯ** : ಏನಾ ದುಡ್ಡು ಹೊಡ್ದುಬುಟ್ರೆ?

**ರಮೇಶ** : ಹೂ..... ಯಾರೊ ಪಿಕ್ ಪಾಕೆಟ್ ಮಾಡ್ಬುಟ್ಟವ್ರೆ.

**ಪುಟ್ಟಸ್ವಾಮಿ** : ಯಾವ ಜೇಬಲ್ಲಿ ಇಟ್ಟಿದ್ದೆ ದುಡ್ಡ?

**ರಮೇಶ** : ಈ ಮೇಲ್ಗಡೆ ಜೇಬಲ್ಲೆ ಇಟ್ಟಿದ್ದೆ. ಇಲ್ನೋಡಿ, ಹೆಂಗೆ ಬ್ಲೇಡ್ ಹಾಕಿ ಹರ್ದಾಕವ್ರೆ. (ಹರಿದು ಹೋಗಿದ್ದ ತನ್ನ ಜೇಬನ್ನು ಇಬ್ಬರಿಗೂ ತೋರಿಸುತ್ತಾನೆ.)

**ಈರಯ್ಯ** : ಜೋಬಲ್ಲಿ ಎಷ್ಟಿತ್ತು ದುಡ್ಡು ?

**ರಮೇಶ** : ಊರಲ್ಲಿ ನೀವು ಬೆಳಗ್ಗೆ ಕೊಟ್ಟಿದ್ದ ಐನೂರು ರೂಪಾಯ್ನಲ್ಲಿ ಬಸ್ಸಿಗೆ, ಆಟೋಗೆ, ಊಟಕ್ಕೆ ಕೊಟ್ಟು ಇನ್ನೂರು ಉಳಿದಿತ್ತು. ಅಷ್ಟನ್ನು ಇದೊಂದೆ ಜೇಬಲ್ಲಿ ಮಡಗಿದ್ದೆ.

**ಪುಟ್ಟಸ್ವಾಮಿ** : ಒಂದರಲ್ಲೆ ಯಾಕೆ ಇಟ್ಟಿದ್ದೆ? ಇದು ಕಳ್ ನನ್ಮಗನ ಊರು ಅಂತ ಗೊತ್ತಿಲ್ವೆ ನಿಂಗೆ?

**ಈರಯ್ಯ** : ಅಯ್ಯೋ.... ಉಂಡಂಗಲ್ಲ... ತಿಂದಂಗಲ್ಲ. ಅನ್ಯಾಯವಾಗಿ ಇನ್ನೂರು ರೂಪಾಯಿ ಕಳ್ದುಬುಟ್ಟಲ್ಲ, ಯಾವ ಲೌಡಿ ಮಕ್ಳು ಎತ್ಕೊಂಡ್ರೊ ಏನೊ? ಅವರ್ಮನೆ ಎಕ್ಕುಟ್ಹೋಗ.

**ಪುಟ್ಟಸ್ವಾಮಿ** : ಐನಾತಿ ಕಳ್ಳರವ್ರೆ ಇಲ್ಲಿ.

**ಈರಯ್ಯ** : ಏ.... ರಮೇಶ, ಬೆಪ್ ನನ್ಮಗ ಕಣೋ ನೀನು, "ಕಳ್ಳರು ಅವ್ರೆ, ಹುಷಾರಾಗಿರಿ" ಅಂತ ಅಲ್ಲಿ ಬೋರ್ಡ್ ಹಾಕವ್ರೆ. ಅದ ಹೊತಾರೆ ನೀನೆ ಓದಿ ಹೇಳಿದ್ದೆ ನಂಗೆ. ಅಂಥಾದ್ದರಲ್ಲೂ ಹಿಂಗೆ ಮಾಡ್ಕೊಂಡಲ್ಲ.

(ಕಳ್ಳರ ಫೋಟೊಗಳ ಕಡೆ ನೋಡುತ್ತಾ)
ಯಾರೊ, ಇಲ್ಲಿರೂರಲ್ಲೇ ಒಬ್ಬ ಕತ್ತರಿಸಿರ್ಬೇಕು.

**ಪುಟ್ಟಸ್ವಾಮಿ** : ಇಷ್ಟು ಜನವೇ ಏನು? ದೇಶದ ಕಳ್ಳರೆಲ್ಲಾ ಈ ಊರಲ್ಲೆ ತುಂಬ್ಕೊಂಡವ್ರೆ.

(ಈರಯ್ಯನವರಿಗೆ ಏನನ್ನಿಸಿತೊ ಏನೋ, ಇದ್ದಕ್ಕಿದ್ದಂತೆಯೇ ಆವೇಶಭರಿತರಾಗಿ, ರಮೇಶನನ್ನೆ ದುರುಗುಟ್ಟುಕೊಂಡು ನೋಡುತ್ತಾ, ತಮ್ಮ ನಡುವಿನ ಭಾಗವನ್ನು ಅವನಿಗೆ ತೋರಿಸುತ್ತಾ)

**ಈರಯ್ಯ** : ನೋಡೋ ರಮೇಶ, ನೀ ಕಂಡಂಗೆ, ನಾನು ಇಲ್ಲೆ ನಲವತ್ತು ಸಾವಿರ ರೂಪಾಯ್ನ ಊರಿಂದ ಇಟ್ಕೊಂಡು ತಂದಿದ್ದೆ. ಯಾವ ಕಳ್ ನನ್ಮಗನಾದ್ರು ಇಲ್ಲಿಗೆ ಕತ್ರಿ ಹಾಕೋಕೆ ಆಯ್ತೆ?

(ನೋಟುಗಳನ್ನು ಕಟ್ಟಿ ತಂದಿದ್ದ, ಆ ಬಟ್ಟೆಯನ್ನು ತನ್ನ ನಡುವಿನಿಂದ ಬಿಚ್ಚಿ, ಮೇಲಕ್ಕೆ ಒದರಿ, ಅವನ ಮುಂದೆ ಒಡ್ಡಿ ತೋರಿಸುತ್ತಾ)

ಹೇಳೋ ರಮೇಶ, ಯಾವ ಕಳ್ ನನ್ಮಗನಾದ್ರು ಇದಕ್ಕೆ ಕತ್ರಿ ಹಾಕೊಕೆ ಆಯ್ತೇನೊ?

(ಅಪ್ಪನ ಪ್ರಶ್ನೆಗೆ ಉತ್ತರ ಹೇಳದೆ ಮೂಕನಂತೆ ರಮೇಶ ನಿಲ್ಲುತ್ತಾನೆ. ಹುಚ್ಚನಾಗಿದ್ದ ಯುವಕ ಈಗ ರಂಗದ ಎಡಬದಿಯಿಂದ ಮತ್ತೆ ಅತಿ ವೇಗವಾಗಿ ನುಗ್ಗಿ ಬರುತ್ತಾನೆ. "ಕಳ್ಳರಿದ್ದಾರೆ, ಎಚ್ಚರಿಕೆ" ಎಂಬ ಬೋರ್ಡಿನ ಬಳಿ ಬಂದು ನಿಂತು, ಕ್ಷಣಕಾಲ ಆ ಬೋರ್ಡಿನಲ್ಲಿದ್ದ ಕಳ್ಳರ ಫೋಟೊಗಳನ್ನೆ ದುರುಗಟ್ಟಿಕೊಂಡು ನೋಡುತ್ತಾನೆ. ಮರುಕ್ಷಣದಲ್ಲಿಯೇ ಆ ಬೋರ್ಡಿನ ಸಣ್ಣ ತಂತಿಗಳನ್ನು ಮುರಿದು ಒಳಕ್ಕೆ ಕೈ ಹಾಕಿ, ಅಲ್ಲಿದ್ದ ಕಳ್ಳರ ಫೋಟೊಗಳನ್ನು ಪರಪರನೆ ಕೀಳತೊಡಗುತ್ತಾನೆ.)

**ಪುಟ್ಟಸ್ವಾಮಿ** : ಅಲ್ನೋಡಿ ಅವನ ಕೆಲಸವ.

(ಮೂವರು ಅತ್ತ ನೋಡತೊಡಗುತ್ತಾರೆ. ಆ ಯುವಕನು ಅಲ್ಲಿದ್ದ ಜೇಬುಗಳ್ಳರ ಫೋಟೊಗಳೆಲ್ಲವನ್ನೂ ಸಂಪೂರ್ಣವಾಗಿ ಕಿತ್ತು , ಹರಿದು, ಎಸೆಯುತ್ತಾನೆ. ಆನಂತರ ತನ್ನ ಬಗಲಲ್ಲಿದ್ದ ಕೈ ಚೀಲದಿಂದ ಭ್ರಷ್ಟ ರಾಜಕಾರಣಿಗಳ ಮತ್ತು ಲಂಚಕೋರ ಅಧಿಕಾರಿಗಳ ಪೇಪರ್ ಕಟಿಂಗ್ ಫೋಟೊಗಳನ್ನು ಹೊರ ತೆಗೆದು ಗೋಂದನ್ನು ಸವರಿ, ಆ ಬೋರ್ಡಿನಲ್ಲಿ ಅಂಟಿಸುತ್ತಾನೆ. "ಕಳ್ಳರಿದ್ದಾರೆ, ಎಚ್ಚರಿಕೆ" ಎಂಬ ನಾಮ ಫಲಕದ ಅಡಿಯಲ್ಲಿದ್ದ ಈ ಫೋಟೊಗಳನ್ನು ನೋಡುತ್ತ, ಚಪ್ಪಾಳೆ ತಟ್ಟುತ್ತಾನೆ. ಅಳತೊಡಗುತ್ತಾನೆ. ಹುಚ್ಚನ ಅಳುವಿನ ಧ್ವನಿಯು ರಂಗದ ತುಂಬಾ ವ್ಯಾಪಿಸಿ, ಪ್ರತಿಧ್ವನಿಸತೊಡಗುತ್ತಿದ್ದಂತೆಯೇ, ರಂಗದ ಮೇಲೆ ಕತ್ತಲು ವ್ಯಾಪಿಸುತ್ತದೆ.)

❍

## ಬರಹಗಾರ

**ಹೆಸರು** : ಸಿ.ಪಿ. ನಾಗರಾಜ

**ತಾಯಿ** : ಲಕ್ಷ್ಮಿದೇವಮ್ಮ, ಮದ್ದೂರು, ಮಂಡ್ಯ ಜಿಲ್ಲೆ.

**ತಂದೆ** : ಪುಟ್ಟೇಗೌಡ, ಚೆಕ್ಕೆರೆ, ಚೆನ್ನಪಟ್ಟಣ ತಾಲ್ಲೂಕು, ರಾಮನಗರ ಜಿಲ್ಲೆ.

**ಓದು** : ಎಂ.ಎ., ಪಿಎಚ್.ಡಿ.

**ಕೆಲಸ** : ಕನ್ನಡ ಉಪನ್ಯಾಸಕ

1971-72 ಅರ್ಜುನಪುರಿ ಕಾಲೇಜು, ಮದ್ದೂರು, ಮಂಡ್ಯ ಜಿಲ್ಲೆ.

1972-2003 ಭಾರತಿ ಕಾಲೇಜು, ಕಾಳಮುದ್ದನ ದೊಡ್ಡಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

2006-ಸ್ನಾತಕೋತ್ತರ ಕೇಂದ್ರ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಮಹಿಳಾ ಕಾಲೇಜು, ಮಲ್ಲೇಶ್ವರಂ, ಬೆಂಗಳೂರು.

**ನಾಟಕ** :

| | |
|---|---|
| ಭಾಗೀರಥಿ | ಅಂಬೆ |
| ಹಾವು | ಅಂಗಿ ಬಟ್ಟೆ |
| ಒಂದು ರೂಪಾಯಿ | ಕಳ್ಳರಿದ್ದಾರೆ... ಎಚ್ಚರಿಕೆ |
| ಹೆಣದ ಹಣ | |

**ಗದ್ಯ** :

| | |
|---|---|
| ಹಳ್ಳಿಗಾಡಿನ ರೂವಾರಿ | ಡಾ.ಬಂದೀಗೌಡ |
| ಆಣೆ ಪ್ರಮಾಣಗಳು | ಬಯ್ಗುಳ |
| ಸರ್ವಜ್ಞ ವಚನಗಳ ಓದು | ಅಲ್ಲಮ ವಚನಗಳ ಓದು |
| ಶಿವಶರಣಶರಣೆಯರ ವಚನಗಳ ಓದು | ಶಿವಶರಣರ ವಚನಗಳ ಓದು |
| ಬಸವಣ್ಣ ವಚನಗಳ ಓದು | ಮುದ್ದೆಗಂಟು |

**ವಿಳಾಸ** : ಸಿ.ಪಿ. ನಾಗರಾಜ, 75, 'ಎ' ಬ್ಲಾಕ್, 5 ನೆಯ ಕ್ರಾಸ್, ಕ್ರಿಶ್ಣ ಗಾರ್ಡನ್, ಆರ್.ವಿ.ಕಾಲೇಜು ಪೋಸ್ಟ್, ಬೆಂಗಳೂರು-560059. ಮೊ.9986347521.
ngy7777@gmail.com